ಸಾಮಾನ್ಯ ಜನಗಳ ಧ್ವನಿಯಾಗಿ ಇದ್ದಂಥ ಒಬ್ಬ ಮಹಾನ್ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಕುಟುಂಬಕ್ಕೆ ಆ ನೋವನ್ನು ಭರಿಸುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತಾ ಚಲನಚಿತ್ರರಂಗದಲ್ಲಿ ವಿಶೇಷವಾಗಿ ಅವರು ಶಾಸಕರಾಗಿ ಹೇಗೇಗೆ ಇದ್ದರೋ, ಅವರು ಚಲನಚಿತ್ರದಲ್ಲಿ ಒಂದು ಪಾತ್ರವನ್ನು ಸಹಾ ಮಾಡಿದ್ದರು. ಅಷ್ಟು ಸರಳತನ ಇತ್ತು. ಯಾವುದೇ ಆಡಂಬರ ಇರುತ್ತಿರಲಿಲ್ಲ. ಮತ್ತೆ ಜೊತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದಾಗ ನಮ್ಮ ಕ್ಷೇತ್ರದಲ್ಲಿ ಗೊರುರು ರಾಮಸ್ವಾಮಿ ಅಯ್ಯಂಗಾರ್‌ರವರು ಕಾಲವಾದ ದಿನಗಳಲ್ಲಿ ಆ ರಸ್ತೆಗೆ ಅವರ ಹೆಸರನ್ನು ಇಡಬೇಕೆಂದು ಹೇಳಿದ್ದನ್ನು ಕಳೆದ 10–15 ದಿನಗಳ ಹಿಂದೆ ಲಾಂಜ್‌ನಲ್ಲಿ ಬಂದಾಗ ನೆನಪು ಮಾಡಿಕೊಂಡು ಏನಾಯಿತಪ್ಪ ಅದು, ಹೆಸರು ಏಕೆ ಇಟ್ಟಿಲ್ಲವೆಂದು ನೆನಪು ಮಾಡಿ ನನ್ನನ್ನು ಕೇಳುತ್ತಿದ್ದರು. ಬಹಳಷ್ಟು ಅವರು ಪಕ್ಷಭೇದವನ್ನು ಮರೆತು ಆ ಗಡಿಯನ್ನು ಮೀರಿದಂಥ ಸ್ನೇಹಜೀವಿ ಅವರು. ಅಂಥವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಮತ್ತು ಯುವಕರಿಗೆ ಅವರು ವಿಶೇಷವಾಗಿ ಗೌರವವನ್ನು ಕೊಡುತ್ತಿದ್ದರು. ಮತ್ತು ಬಡಜನರ ಪರವಾಗಿ ನಿರಂತರ ಹೋರಾಟವನ್ನು ಮಾಡಿದಂಥವರು. ಇಂಥವರನ್ನು ಕಳೆದುಕೊಂಡಿದ್ದೇವೆ. ಇಂತಹ ಒಬ್ಬ ಬಡವರ ಬಾಯಾಗಿದ್ದಂಥ ಧ್ವನಿಯಾಗಿದ್ದಂಥ ರಮೇಶ್ ಅವರು ಇನ್ನಿಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನಾನು ಸಂತಾಪವನ್ನು ಸೂಚಿಸಲು ಬಯಸುತ್ತೇನೆ.

ಅಧ್ಯಕ್ಷರು: ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಸದಸ್ಯರು ಒಂದು ನಿಮಿಷ ಮೌನವನ್ನು ಆಚರಿಸಿದರು)

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರಿಂದ ರೂ. 150 ಕೋಟಿ ಸಂಗ್ರಹ ಮಾಡಿದ್ದಾರೆಂಬ ಹಗರಣಕ್ಕೆ ಸಂಬಂಧಪಟ್ಟಂತೆ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಿಯಮಾವಳಿ ಪ್ರಕಾರ ನಾವು ನಿಲುವಳಿ ಸೂಚನೆ ಮುಂಜಾನೆ ಹತ್ತು ಗಂಟೆಯೊಳಗೆ ತಮ್ಮ ಕಾರ್ಯಾಲಯಕ್ಕೆ ಕಳುಹಿಸಬೇಕಿತ್ತು. ಈಗಾಗಲೇ ಬಹಳಷ್ಟು ವಿರೋಧಪಕ್ಷದ ನಾಯಕರು ಪ್ರಸ್ತಾಪವನ್ನು ಮಾಡಿದ್ದಾರೆ. 11 ಗಂಟೆಗೆ ಕರೆದಂಥ ಸಭೆಗೆ ತಾವು 12–30 ಗಂಟೆಗೆ ಬಂದಿದ್ದೀರಿ. ತಾವೇನು ಹೇಳಿದ್ದೀರಿ, ದೂದ್ಯನಾಯ್ಕ ಮತ್ತು ರಮೇಶ್‌ರವರ ನಿಧನದ ಬಗ್ಗೆ ನಾವು ಸಂತಾಪ ಸೂಚನೆಯನ್ನು ತರುತ್ತಿದ್ದೇವೆ, ಎನ್ನುವ ಮಾತನ್ನು ಹೇಳಿದಾಗ ನಾವು ಅದನ್ನು ಒಪ್ಪಿದ್ದೇವೆ. ಈಗ ನಿಲುವಳಿ

ಸೂಚನೆಯನ್ನು ಕಳುಹಿಸತಕ್ಕದ್ದು ತಮ್ಮ ನಿಯಮಾವಳಿಯಲ್ಲಿದೆ. ಯಾವುದಾದರೂ ಕೂಡ ಸಾರ್ವಜನಿಕ ಹಿತ ದೃಷ್ಟಿಯಿಂದ ಇವತ್ತು ನಾವು ಅಡ್ಜರ್ನ್‌ಮೆಂಟ್ ಮೋಷನನ್ನು ಕಳುಹಿಸಬೇಕಾದರೆ ಒಂದು ಗಂಟೆ ಮೊದಲೇ ಕಳುಹಿಸಬೇಕಾಗುತ್ತದೆ. ಒಂದು ಗಂಟೆ ಮೊದಲೇ ಕಳುಹಿಸಿದ ಮೇಲೆ ಮುಖ್ಯಮಂತ್ರಿಗಳ ಮೇಲಾಗಲಿ, ಗೃಹ ಸಚಿವರ ಮೇಲಾಗಲಿ ಏನೇನು ಇದೆ ಅದನ್ನು ತರಿಸಿ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ತಾವು ವಿವರಣೆಯನ್ನೂ ಕೊಡಬೇಕಾಗುತ್ತದೆ. ಇವತ್ತು ಕಾರ್ಯದರ್ಶಿಗಳಿಂದ ಪ್ರಪ್ರಥಮವಾಗಿ ತಾವೇನು ಸಭಾಧ್ಯಕ್ಷರಾದ ಮೇಲೆ ಪದೇ ಪದೇ ನಾವು ಹೇಳಬೇಕಾಗುತ್ತದೆ. ಈ ಒಂದು ಸದನದಲ್ಲಿ ಚರ್ಚೆ ಆಗತಕ್ಕ ವಿಷಯದಲ್ಲಿ ನಮಗೆ ನ್ಯಾಯ ಸಿಗುತ್ತಿಲ್ಲ. ಇವತ್ತು ಅದರಲ್ಲಿ ಪ್ರಸ್ತಾಪ ಮಾಡಿದಿರಿ. ಮಾನ್ಯ ಬೊಮ್ಮಾಯಿ ಅವರ ಕಾಲದಲ್ಲಿ ಪ್ರಸ್ತಾಪ ಆಗಿದೆ, ಗ್ರೋವರ್ ಕಮೀಷನ್, ಬೇರೆ ಬೇರೆ ಕಡೆಯದ್ದೂ ಕೂಡ ಉದಾಹರಣೆ ಮಾಡಿ ಇವತ್ತು ತಮ್ಮ ಪ್ರಧಾನ ಕಾರ್ಯದರ್ಶಿಗಳು ಕಳಿಸಿದ ಪತ್ರ ಈಗಾಗಲೇ ಇಲ್ಲಿ ಕುಳಿತಾಗ ಬಂದಿದೆ. ಅದಕ್ಕೆ ನಿಲುವಳಿ ಸೂಚನೆಗೆ ಅವಕಾಶ ಇಲ್ಲ ಎಂಬ ಮಾತನ್ನು ತಾವು ಹೇಳಿದ್ದೀರಿ. ಈಗಾಗಲೇ ಬೆಂಗಳೂರು–ಮೈಸೂರು ಪ್ರಾಜೆಕ್ಟ್ ಬಗ್ಗೆ ಬಹಳ ಸವಿಸ್ತಾರವಾದ ಉತ್ತರವನ್ನು ಮಾನ್ಯ ಸಭಾ ನಾಯಕರು ಕೊಟ್ಟಿದ್ದಾರೆ. ನಾನೂ ಕೂಡ ವಿರೋಧ ಪಕ್ಷದಲ್ಲಿದ್ದು ನಮ್ಮ ಆತಂಕಗಳು ಏನು ಇವೆ ಅದರ ಬಗ್ಗೆ ನಾವು ಸ್ಪಷ್ಟೀಕರಣ ಕೇಳಿದ್ದೇವೆ. ನ್ಯಾಯಾಂಗ ತನಿಖೆ ಮಾಡತಕ್ಕಂಥದ್ದು ಸರ್ಕಾರದ ನಿಲುವು ಎಂದು ಹೇಳಿದ್ದಾರೆ. ಆದರೂ ಕೂಡ ಈ ಸಮ್ಮಿಶ್ರ ಸರ್ಕಾರದ ಸ್ಪಷ್ಟವಾದ ನಿಲುವು ನೈಸ್ ವಿಚಾರವಾಗಿ ಇನ್ನೂ ಕೂಡ ಅವರು ಹೇಳಿಲ್ಲ. ರಿವ್ಯೂ ಪಿಟಿಷನ್‌ಗೆ ಹೋಗಿದ್ದಾರೆ. ಇವೆಲ್ಲವನ್ನೂ ಇಟ್ಟುಕೊಂಡು ನಾವೇನು ಹೇಳಿದ್ದೇವೆ? 11 ವರ್ಷಗಳ ಕಾಲ ಇದು ನಡೆದು ಬಂದಂತಹದು. ನೈಸ್ ವಿಚಾರ 11 ವರ್ಷಗಳ ಕಾಲ ನಡೆದು ಬಂದಂತಹ ವಿಚಾರ. ಕರ್ಮಕಾಂಡ ಎಂದು ಹೇಳಿದ್ದಾರೆ. ಕರ್ಮಕಾಂಡದ ಬಗ್ಗೆ ಸಿಬಿಐ ತನಿಖೆ ಆದರೆ ಸ್ಪಷ್ಟವಾದಂತಹ ಉತ್ತರ ರಾಜ್ಯದ ಜನತೆಗೆ ಬರುತ್ತದೆ. ಇವತ್ತು ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಮಾಧುಸ್ವಾಮಿಯವರು ನಿಲುವಳಿ ಸೂಚನೆ ಮುಖಾಂತರ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಇವತ್ತೇನಾಗಿದೆ? ನಾವು ಯಾವ ತೀರ್ಮಾನಕ್ಕೆ ಬಂದಿದ್ದೇವೆ? ಚರ್ಚೆ ಯಾಕಾಯಿತು? ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ರಾಜ್ಯದ ಜನತೆಗೆ ಗೊತ್ತಾಗಬೇಕಾಗುತ್ತದೆ ಎಂದು ನಾವು ಈ ಸ್ಥಾನದಲ್ಲಿ ಕುಳಿತು ಕೇಳತಕ್ಕದ್ದೂ ಕೂಡ ನಮ್ಮ ಆದ್ಯ ಕರ್ತವ್ಯ ಆಗುತ್ತದೆ. ನಾವು ಅದರಲ್ಲೂ ಧರಣಿ ಮಾಡುತ್ತಿದ್ದೇವೆ. ಧರಣಿಯನ್ನು ನಾವು ವಾಪಸ್ ತೆಗೆದುಕೊಂಡಿಲ್ಲ. ತಾತ್ಕಾಲಿಕವಾಗಿ ನಾವು ಅದನ್ನು ಮುಂದೆ ಹಾಕಿದ್ದೇವೆ.

ಸಿಬಿಐ ತನಿಖೆ ಆಗಲೇಬೇಕು ಎಂದು ಹೇಳತಕ್ಕ ನಮ್ಮ ನಿರ್ಧಾರ ಇದೆ, ಅದರಿಂದ ಇವತ್ತು ಎಲ್ಲಾ ಏನೇನು ಪ್ರಕರಣಗಳು ಇವೆ, ಯಾರ್ಯಾರ ಕಾಲದಲ್ಲಿ ಆಯಿತು? ಏನೇನಾಯಿತು? 1995ರಿಂದ ಇಲ್ಲಿಯವರೆಗೆ ಏನಾಗಿದೆ ಮತ್ತು ಯಾರ್ಯಾರ ಮೇಲೆ ಏನೇನು ಆರೋಪ ಆಗಿದೆ ಎನ್ನತಕ್ಕದ್ದೂ ಕೂಡ ಆಗಿದೆ. ಯಾವ ರೀತಿಯಾಗಿ ಇದರಲ್ಲಿ ಸಂಪುಟದ ಸಭೆಯಲ್ಲಿ ತೀರ್ಮಾನಕ್ಕೆ ಬರಲಿಕ್ಕೆ ಆಗಲಿಲ್ಲ ಎಂಬ ವಿಷಯವನ್ನು ಎತ್ತಿ ನೆನಪು ಮಾಡಿದ್ದೇವೆ. ಆದರೆ ಇದು ಗಂಭೀರವಾದಂತಹ ವಿಚಾರ ಇದೆ. ಇವತ್ತು ನಾವೇನೂ ಮಾಡಲಿಕ್ಕೆ ಹೋಗಲಿಲ್ಲ. ನಿಮ್ಮ ಪಕ್ಷದವರೇ ಆದಂತಹ ಬಿಜೆಪಿ ಅಧ್ಯಕ್ಷರು ಇವತ್ತು ವಿಧಾನ ಪರಿಷತ್ತಿನ ಸದಸ್ಯರು ಆಗಿದ್ದಾರೆ. ಎಲ್ಲೋ ಒಂದು ಕಡೆ ಪಾಸಿಂಗ್ ರಿಮಾರ್ಕ್ಸ್ ಮಾಡಿದರೆ that is different. ಇವತ್ತು ಎರಡೂ ಪಕ್ಷಗಳೂ ಕೂಡಿ ಸರ್ಕಾರ ನಡೆಸುತ್ತಿದ್ದೀರಿ. ಇವತ್ತು ಮಾನ್ಯ ಕುಮಾರಸ್ವಾಮಿಯವರು ಈ ಒಂದು ಸರ್ಕಾರದ ಮುಖ್ಯಮಂತ್ರಿಗಳಾಗಿದ್ದಾರೆ. ಜವಾಬ್ದಾರಿ ಅವರ ಮೇಲೆ ಇದೆ. ಸದನ ನಡೆಯುತ್ತಿದೆ. ವಿಧಾನ ಪರಿಷತ್ತಿನ ಸದಸ್ಯರು ಸದನದ ಹೊರಗಡೆ ಪತ್ರಿಕಾ ಹೇಳಿಕೆ ಕೊಡುತ್ತಿದ್ದಾರೆ. ಪ್ರೆಸ್ ಕಾನ್‌ಫೆರೆನ್ಸ್ ಮಾಡುತ್ತಿದ್ದಾರೆ. ಪದೇ ಪದೇ repeatedly ಹೇಳುತ್ತಿದ್ದಾರೆ. ಇವತ್ತು ಮಾನ್ಯ ಕುಮಾರಸ್ವಾಮಿಯವರು, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು 150 ಕೋಟಿ ರೂಪಾಯಿ ಹಗರಣದಲ್ಲಿ, ಮಾನ್ಯ ಚೆನ್ನಿಗಪ್ಪನವರೂ ಕೂಡ ಇದ್ದಾರೆ ಎನ್ನುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಕೇಳಬಯಸುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ಆಗಲೇ ನಿಮ್ಮ ನಿಲುವಳಿ ಸೂಚನೆಯನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ನೀವು ಹೇಗೆ ತಳ್ಳಿ ಹಾಕುತ್ತೀರಿ?

ಅಧ್ಯಕ್ಷರು: ತಮಗೂ ತಿಳಿಸಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಇಲ್ಲ ಇಲ್ಲ. ಪ್ರಸ್ತಾಪಕ್ಕೆ (ಹಿಂದೆ ಇದು ಯಾವಾಗಲೂ ಆಗಿಲ್ಲ).

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ನೀವು ಕಾರ್ಯಾಲಯದಲ್ಲಿ ಕುಳಿತು...

ಅಧ್ಯಕ್ಷರು: ನನ್ನ ವಿನಂತಿ ಏನೆಂದರೆ..

ಶ್ರೀ ಎನ್. ಧರ್ಮಸಿಂಗ್: ನಿಮ್ಮ ಕಾರ್ಯಾಲಯದಲ್ಲಿ ಕುಳಿತು ಪತ್ರದ ಮುಖಾಂತರ ತಳ್ಳಿ ಹಾಕಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ನಾನು ಸ್ಪಷ್ಟವಾಗಿ ಹೇಳಿದ್ದೇನೆ.

(ಅಡಚಣೆ)

ಅಧ್ಯಕ್ಷರು: ನಿಲುವಳಿ ಸೂಚನೆ ಮೇಲೆ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಕುಮಾರಸ್ವಾಮಿಯವರ ಮೇಲೆ ನಾವು ಆಪಾದನೆ ಮಾಡುತ್ತಿಲ್ಲ. ಮಿತ್ರ ಪಕ್ಷಗಳು ಆಪಾದನೆ ಮಾಡುತ್ತಿದ್ದಾವೆ.

ಶ್ರೀ ಆರಗ ಜ್ಞಾನೇಂದ್ರ: ಸಾರ್, ಯಾವ ನಿಯಮಾವಳಿ ಪ್ರಕಾರ ಮಾತನಾಡುತ್ತಿದ್ದಾರೆಂದು ಅವರಿಗೆ ಅವಕಾಶ ಕೊಟ್ಟಿದ್ದೀರಿ?

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ಸ್ಪಷ್ಟೀಕರಣ ಕೊಡಬೇಕಾಗುತ್ತದೆ.

(ಅಡಚಣೆ)

ಅಧ್ಯಕ್ಷರು: ನಿಮ್ಮ ಹತ್ತಿರ ಡಾಕ್ಯುಮೆಂಟ್ಸ್ ಇದ್ದರೆ 328ರ ಕೆಳಗಡೆ ಕೊಡಿ. ನನ್ನ ಛೇಂಬರಿಗೆ ಬಂದು ಭೇಟಿ ಮಾಡಿರಿ. ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಅರಣ್ಯ ಮಂತ್ರಿಗಳನ್ನು ಕರೆಸುತ್ತೇನೆ. ಅಲ್ಲಿ ಮಾತನಾಡಲು ಅವಕಾಶ ಕೊಡಬಹುದು. ಅದು ಬಿಟ್ಟು ಬಿಟ್ಟು ಯಾವುದೋ ಒಂದು ಪತ್ರಿಕಾ ಹೇಳಿಕೆ ಆಧಾರದ ಮೇಲೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ತಳ್ಳಿ ಹಾಕಿದ್ದೇನೆ. ನಾನು ಸ್ಪಷ್ಟಪಡಿಸಿದ್ದೇನೆ. ಅದಲ್ಲದೇ, ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಅರಣ್ಯದ ವಿಚಾರ ಇದೆ. It is on the table. It is on the agenda. ಆಗ ಹೇಳಬಹುದು.... ಬೇಡಿಕೆ ಇಟ್ಟಾಗ ನೀವು ಮಾತನಾಡಬಹುದು.

ಶ್ರೀ ಎನ್. ಧರ್ಮಸಿಂಗ್: ಇದರ ಬಗ್ಗೆ ಚರ್ಚೆ ಆಗಬೇಕು. ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಿದ ಮೇಲೆ.

ಶ್ರೀ ಎನ್. ಚೆಲುವರಾಯಸ್ವಾಮಿ: ತಮ್ಮ ಅನುಮತಿ ಇಲ್ಲದೇ ಅವರು ಪ್ರಸ್ತಾಪ ಮಾಡುತ್ತಿರುವುದು ಸೂಕ್ತವಲ್ಲ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಯಾವ ಸಂದರ್ಭದಲ್ಲೂ ಕೂಡ ಆಗಿಲ್ಲ. ನಿಮ್ಮ ಛೇಂಬರಿನಲ್ಲಿ ಕುಳಿತು ಇವನ್ನು ತಿರಸ್ಕಾರ ಮಾಡತಕ್ಕದ್ದು ಸರಿಯಾದುದು ಅಲ್ಲ. ಈ ರೀತಿ ನಡವಳಿಕೆಗಳು ಎಂದೂ ಆಗಿಲ್ಲ ಎನ್ನತಕ್ಕ ಮಾತುಗಳು ಏನು ಇವೆ? ಅದು ನಿಮ್ಮ ನಿಯಮಾವಳಿಗಳ ಪ್ರಕಾರ ಸರಿಯಾದುದು ಅಲ್ಲ. ಪಾರ್ಲಿಮೆಂಟಿನಲ್ಲಿ ಇಂತಹ ವಿಷಯ ಬಂದಾಗ ಕೂಡ ಮಾನ್ಯ ಸ್ಪೀಕರ್ ಅವರು ಕೊಟ್ಟಿರತಕ್ಕಂಥ ಉದಾಹರಣೆಗಳು ಇವೆ. ಇಲ್ಲಿ ಶ್ರೀ ಎಂ.ಎಸ್. ಗುರುಪಾದಸ್ವಾಮಿ ಅವರು...

"On 30th of June, 1952....."

(INTERRUPTIONS)

SRI M.P. PRAKASH: I will come to that.

(ಅಡಚಣೆ)

ಅಧ್ಯಕ್ಷರು: ದಯಮಾಡಿ, ಅವರು ಏನೋ ಹೇಳುತ್ತಾರೆ.

SRI M.P. PRAKASH: I wanted to make it very clear.

"On 30th June, 1952 also in connection with an Adjournment Motion tabled by Sri M.S. Gurupadaswamy, the Speaker observed that the text of the Adjournment Motions which are inadmissible need not be read in the House"

At the same time aslo:

"While disallowing an Adjournment Motion tabled by Sri R. Velayaudhan on the 5th March, 1952, the Speaker did not read it to the House. When the Member requested that the House should know about it, the Speakr also made the observation:

"It is the privilege of the Chair to decide whether a motion to be admitted or not. So long as..."

ಮಾನ್ಯ ಕೃಷ್ಣಪ್ಪನವರು ಹೇಳಿದರು... ನೀವೇನು ನಿರಂಕುಶಮತಿಗಳಾ? You are not a dictator, ಎಂದರು. ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ಸ್ವಲ್ಪ ಕೇಳಿ.

(ಅಡಚಣೆ)

ಒಬ್ಬ ಮಾನ್ಯ ಸದಸ್ಯರು: ತಾವು ಉತ್ತರ ಕೊಡಿ ಸಾರ್.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಿಮ್ಮ ಛೇಂಬರಿನಲ್ಲಿ ತಳ್ಳಿ ಹಾಕುವುದಕ್ಕೆ ನಿಮಗೆ ಅಧಿಕಾರ ಇಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಮಾನ್ಯ ಹಿರಿಯರಾದಂತ ಕೃಷ್ಣಪ್ಪನವರು ಹೇಳಿದರು. 'You are not a dictator. You cannot pass an order like this.' ಎಂದರು. There is a precedent. This is absolutely a privilege and a prerogative of the Speaker whether to be disallowed and inadmissible, whether in the chamber or in the House, ಎನ್ನತಕ್ಕದ್ದು. ಅದು ಗೊತ್ತಿದೆ. That is a different thing. It is your version. That is your version.

ಶ್ರೀ ಎನ್. ಚೆಲುವರಾಯಸ್ವಾಮಿ: ತಮ್ಮ ಭಾವನೆಯನ್ನೇ ಕೇಳಬೇಕು ಎಂದು ಇಲ್ಲ. ಸರ್ಕಾರಕ್ಕೆ ತನ್ನದೇ ಆದಂತಹ ಸಂವಿಧಾನದ ಚೌಕಟ್ಟು ಇದೆ, ಆ ಚೌಕಟ್ಟಿನಲ್ಲಿ ಸರ್ಕಾರ ನಡೆಸಬೇಕಾಗುತ್ತದೆ. ತಾವು ಹೇಳುವುದನ್ನು ನಾವು ಕೇಳಬೇಕು ಎಂದು ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದಂತಹ ಒಂದು ವಾಕ್ಯ ಇಡೀ

ಸದನದ ಎಲ್ಲಾ ಸದಸ್ಯರೂ ಕೂಡ ಆಶ್ಚರ್ಯಪಡುವಂತಹ ಒಂದು ಮಾತನ್ನು ಆಡಿದ್ದಾರೆ.

ಶ್ರೀ ಎನ್. ಮಲ್ಲಿಕಾರ್ಜುನ ಖರ್ಗೆ: ನಾನೂ ಒಂದು ಮಾತು ಹೇಳಬಹುದಾ?

(ಅಡಚಣೆ)

ಅಧ್ಯಕ್ಷರು: ಅವರು ಏನೋ ಹೇಳುತ್ತಿದ್ದಾರೆ.

ಅಧ್ಯಕ್ಷರು: ದಯಮಾಡಿ, ಯಾರು ಮಾತನಾಡಿದರೂ ಕೇಳುವುದಿಲ್ಲ. ಈಗ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಇದೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನೂ ಸಹ ಅವಕಾಶ ಕೇಳಿದ್ದೆ.

ಅಧ್ಯಕ್ಷರು: ಅವರದ್ದು ಆದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ ಇಡೀ ಸದನದ 225 ಜನ ಆಶ್ಚರ್ಯಪಡುವಂತಹ ರೀತಿಯಲ್ಲಿ ಒಂದು ವಾಕ್ಯವನ್ನು ಹೇಳಿದ್ದಾರೆ.

(ಅಡಚಣೆ)

ಅಧ್ಯಕ್ಷರು: ಕೊಡಿ.....

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ನಮ್ಮ ಸದಸ್ಯರುಗಳು...

(ಅಡಚಣೆ)

ಶ್ರೀ ಎನ್. ಚೆಲುವರಾಯಸ್ವಾಮಿ: ಕೃಷ್ಣಪ್ಪನವರೆ, ಸಭಾನಾಯಕರು ಎದ್ದಾಗ ಕನಿಷ್ಠ ತಾವು ಸದನದ ಗೌರವ ಉಳಿಸುವಂತೆ ಮಾತನಾಡಿ. ಸದಸ್ಯರಾಗಿದ್ದೇವೆಂದು ನಿಮ್ಮ ಇಷ್ಟ ಬಂದಂತೆ ಮಾತನಾಡುವುದೇ? ನೀವು ಇಲ್ಲಿ ದಾದಾಗಿರಿ ಮಾಡುವುದಕ್ಕೆ ಬಂದಿದ್ದೀರಾ? ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ: ಸದಸ್ಯರಾಗಿ ಮಾತನಾಡುವ ರೀತಿ ಕಲಿತುಕೊಳ್ಳಿ. ಅಧ್ಯಕ್ಷರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ, ನೀವು ಹಿರಿಯ ಸದಸ್ಯರಾಗಿ ನಡೆದುಕೊಳ್ಳುವ ರೀತಿಯಲ್ಲಿ ನಡೆದುಕೊಳ್ಳಿ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ: ಇವರಿಂದ ನಾವು ಕಲಿತುಕೊಳ್ಳಬೇಕಾದ ಅವಶ್ಯಕತೆಯೇನೂ ಇಲ್ಲ.

ಅಧ್ಯಕ್ಷರು: ಯಾರಾದರೊಬ್ಬರು ಮಾತನಾಡುತ್ತಿದ್ದರೆ, ಕೇಳಬಹುದು, ಸುಮ್ಮನೆ ಆ ಕಡೆ ಈ ಕಡೆ ಎಲ್ಲರೂ ನಿಂತುಕೊಂಡರೆ ಏನಾಗುತ್ತದೆ? ಅವರು ಏನು

ಹೇಳುತ್ತಾರೆಂಬುದನ್ನು ಕೇಳಿ ಅದಕ್ಕೆ ಉತ್ತರ ಕೊಡಿ. ಸುಮ್ಮನೆ ಗಲಾಟೆ ಮಾಡಿಕೊಂಡು ಹೋದರೆ ಏನು ಪ್ರಯೋಜನ? ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎ. ಕೃಷ್ಣಪ್ಪ: ** ಹೇಳುವುದಕ್ಕೆ?

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ನೀವು ಪರಸ್ಪರ charges frame ಮಾಡಿದರೆ ಏನು ಪ್ರಯೋಜನ?

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ: ಇವರು ಪದಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿಲ್ಲ. ಒಬ್ಬ ಸದಸ್ಯರಾಗಿ ಹೇಗೆ ನಡೆದುಕೊಳ್ಳಬೇಕು, ಹೇಗೆ ಮಾತನಾಡಬೇಕೆಂಬುದೇ ಗೊತ್ತಿಲ್ಲ.

ಶ್ರೀ ಎ. ಕೃಷ್ಣಪ್ಪ: **

ಅಧ್ಯಕ್ಷರು: ಇದು ಯಾರಿಗೂ ಶೋಭೆ ತರತಕ್ಕಂಥಾದ್ದಲ್ಲ. ಪ್ರಜಾಪ್ರಭುತ್ವದಲ್ಲಿ ಅವರವರ ವಿಚಾರಗಳನ್ನು ಅವರು ಹೇಳಬೇಕಾಗುತ್ತದೆ.

ಶ್ರೀ ಎನ್. ಚೆಲುವರಾಯಸ್ವಾಮಿ: ** ಕುಳಿತುಕೊಳ್ರಿ ಇಲ್ಲಿ ಯಾರೂ ಕಲಿತುಕೊಳ್ಳಬೇಕಾಗಿಲ್ಲ. ನಿಮ್ಮಿಂದ ಯಾರೂ ಕಲಿತುಕೊಳ್ಳಬೇಕಾಗಿಲ್ಲ. ಆಡಳಿತ ಮಾಡುವುದು ನಮಗೆ ಗೊತ್ತಿದೆ.

SRI A. KRISHNAPPA: **

(ಅಡಚಣೆ)

ಅಧ್ಯಕ್ಷರು: ಏನಿದು?

ಶ್ರೀ ಎ. ಕೃಷ್ಣಪ್ಪ: ಮಾನ-ಮರ್ಯಾದೆ ಇಲ್ಲದೆ ಮಾತನಾಡುತ್ತಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ-ಮರ್ಯಾದೆಯನ್ನು ನೀವು ಇಟ್ಟುಕೊಂಡಿದ್ದೀರಾ? ಅಧ್ಯಕ್ಷರೆ, ಕೆಳಿ.

ಶ್ರೀ ಎ. ಕೃಷ್ಣಪ್ಪ: ನನಗಿಲ್ಲ. I am alright.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಯಾವುದೇ ಸದಸ್ಯರು ದಯವಿಟ್ಟು ಭಾವೋದ್ವೇಗಕ್ಕೆ ಒಳಗಾಗುವುದು ಬೇಡ. ನಮ್ಮ ಸದನಕ್ಕೆ ಬಹಳ ಘನತೆ ಇದೆ. ಯಾವುದಾದರೊಂದು ವಿಷಯದಲ್ಲಿ ಯಾರಾದರೂ ಮಾತನಾಡಿದಾಗ ಮಾನ್ಯ ಕೃಷ್ಣಪ್ಪನವರನ್ನು, ಚೆಲುವರಾಯಸ್ವಾಮಿಯವರನ್ನು ಮತ್ತು ಎಲ್ಲರಲ್ಲೂ ನಾನು ವಿನಂತಿಸಿಕೊಳ್ಳುತ್ತೇನೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ನಿಮಗೆ ಏನೆನಿಸುತ್ತದೋ ಅದೆಲ್ಲವನ್ನೂ ಹೇಳಿ. ನಿಮಗೆ ಹೇಳುವ ಸ್ವಾತಂತ್ರ್ಯವಿದೆ. ಎಲ್ಲವನ್ನೂ ಹೇಳಿ. ದಯವಿಟ್ಟು ಭಾವೋದ್ವೇಗಕ್ಕೆ ಒಳಗಾಗದೆ ಕಲಾಪಗಳನ್ನು....

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ಮೊದಲು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್: ...ಆದುದರಿಂದ, ದಯವಿಟ್ಟು ಎಲ್ಲರೂ ಕೂಡ ಸದನದ ಕಲಾಪಗಳು ಹೆಚ್ಚು ಅರ್ಥಪೂರ್ಣವಾಗಿ ನಡೆಯುವುದಕ್ಕೆ ಸಹಕರಿಸಬೇಕು. ಶಾಂತಿಯನ್ನು ಕಾಪಾಡಬೇಕು. ಸಭಾ ನಾಯಕರು ಎದ್ದಾಗ ಅವರ ಮಾತಿಗೂ ಗೌರವ ಕೊಡಬೇಕು ಹಾಗೆಯೇ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರು ಮಾತನಾಡಲು ಎದ್ದು ನಿಂತಾಗ ಅವರ ಮಾತುಗಳನ್ನು ಕೇಳುವ ಸೌಜನ್ಯವನ್ನು ನಾವು ತೋರಿಸಬೇಕಾಗುತ್ತದೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಸಭಾಧ್ಯಕ್ಷರೆ, ಸಭಾನಾಯಕರು ಎದ್ದಾಗ ಅವರೂ ಎದ್ದು ನಿಂತು ಮನಸ್ಸಿಗೆ ಬಂದಂತೆ ಮಾತನಾಡುತ್ತಾರೆ. ಹೇಗೆ ಮಾತನಾಡಬೇಕೆಂಬ ಸೌಜನ್ಯವೇ ಅವರಿಗೆ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ನಾನು ವಿನಂತಿಸಿಕೊಳ್ಳುತ್ತಿದ್ದೇನೆ: ಯಾವುದೇ ಭಾವೋದ್ವೇಗದ ಬೇಗೆಯಲ್ಲಿ ಅದನ್ನು ದೂರ ತೆಗೆದುಕೊಂಡು ಹೋಗುವುದು ಬೇಡ. ಇಲ್ಲಿಗೇ ಮರೆತು ಬಿಡೋಣ.

(ಅಡಚಣೆ)

ಶ್ರೀ ಎನ್. ಚೆಲುವರಾಯಸ್ವಾಮಿ: ನಾವು ಕೃಷ್ಣಪ್ಪನವರಿಗೆ ಹೇಳಲಿಲ್ಲ. **. ನಾನು ಮರ್ಯಾದೆಯಿಂದ ಒಬ್ಬ ಸಚಿವನಾಗಿ ಮಾತನಾಡಿದ್ದೇನೆ. ನಾವು ಕೃಷ್ಣಪ್ಪನವರಿಗೆ ಹೇಳಿಲ್ಲ. ಸ್ಪೀಕರ್ ಅವರಿಗೆ ಹೇಳಿದ್ದು.

(ಅಡಚಣೆ)

ಅಧ್ಯಕ್ಷರು: ಈ ರೀತಿ ಸದಸ್ಯರುಗಳೇ ಈ ರೀತಿ ಪರಸ್ಪರ charges exchange ಮಾಡಿಕೊಳ್ಳುವುದು.... ಅಂದರೆ, ನಮ್ಮ ಹಳ್ಳಿಭಾಷೆಯಲ್ಲಿ 'ಬೈದಾಡುವುದು' ಎಂದು ಹೇಳುತ್ತೇವೆ. ಇದು ಯಾರಿಗೂ ಭೂಷಣವಲ್ಲ. ರಾಜ್ಯದ ಐದೂವರೆ ಕೋಟಿ ಕನ್ನಡಿಗರು ತಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿದ್ದು.... ತಮಗೆಲ್ಲರಿಗೂ ನಾನು ಹೇಳುವುದೇನೆಂದರೆ...

(ಅಡಚಣೆ)

ಅಧ್ಯಕ್ಷರು: ದಯಮಾಡಿ ಕೇಳಿ. ನಿಮ್ಮ ಅಭಿಪ್ರಾಯಗಳನ್ನು ** ಯಾರಾದರೂ ಒಬ್ಬರು ಹೇಳಲಿ. ನಾನು ಅವರಿಗೆ ಅವಕಾಶ ಕೊಡುತ್ತೇನೆ. ಅವರು ಹೇಳಲಿ. ಅದಕ್ಕೆ ಪ್ರತಿಯಾಗಿ ನೀವು ಏನು ಉತ್ತರ ಹೇಳಬೇಕೋ ಹೇಳಿ. ಅದು ಬಿಟ್ಟು ಈ ರೀತಿ ಮಾಡಿದರೆ ಇದು ಯಾರಿಗೂ ಶೋಭೆ ತರುವಂಥಾದ್ದಲ್ಲ. ದಯಮಾಡಿ ಸಹಕರಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಅಧ್ಯಕ್ಷರೆ, ನಾನು ಮಾತನಾಡುತ್ತಿದ್ದಾಗ, ಮಧ್ಯದಲ್ಲಿ ಪ್ರಸ್ತಾಪಿಸಿದಿರಿ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ...

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಸಭಾಧ್ಯಕ್ಷರೆ...

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ. ಕೃಷ್ಣಪ್ಪನವರೆ, ಅವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿದ ನಂತರ ** ಮಾತನಾಡಿ.

ಶ್ರೀ ಎನ್. ಚಲುವರಾಯಸ್ವಾಮಿ: ನಾನು ಸಭಾಧ್ಯಕ್ಷರಿಗೆ ಹೇಳಿದ್ದು. ಸಭಾ ನಾಯಕರು ಎದ್ದಾಗ ತಾವು ಮಧ್ಯೆ ಎದ್ದು ನಿಂತು ಹೇಳುವುದು ಸೌಜನ್ಯವಲ್ಲ. ಅದನ್ನು ಹೇಳಿ ಎಂದು ನಾನು ಅಧ್ಯಕ್ಷರಿಗೆ ಹೇಳಿದ್ದು. ಮಾತನಾಡುವುದಕ್ಕೆ ಬರುತ್ತದೆಂದು ಮಾತನಾಡಿದರೆ...

ಅಧ್ಯಕ್ಷರು: ಕೃಷ್ಣಪ್ಪನವರೆ, ದಯಮಾಡಿ ಕುಳಿತುಕೊಳ್ಳಿ. ನೀವು ಹಿರಿಯ ಸದಸ್ಯರು. ಹೀಗೆ ಮಾಡಿದರೆ ಹೇಗೆ?

ಶ್ರೀ ಎನ್. ಚಲುವರಾಯಸ್ವಾಮಿ: ನಿಮಗೆ ಮಾತನಾಡಲು ಬರುತ್ತದೆಂದು ಮಾತನಾಡಿದರೆ ನಾವು ನಿಮಗಿಂತಲೂ ಜಾಸ್ತಿ ಕಲಿತಿದ್ದೇವೆ. ನೀವು ಅಲ್ಲಿ ** ಕುಳಿತಿದ್ದಾಗ ನಾನು ಹೊಸದಾಗಿ ಏನೂ ನೋಡಬೇಕಾಗಿಲ್ಲ.

ಶ್ರೀ ಎ. ಕೃಷ್ಣಪ್ಪ: ಅಧ್ಯಕ್ಷರೆ, ಅವರಿಗೆ ನಾಲಿಗೆ ಬಿಗಿ ಹಿಡಿದು ಮಾತನಾಡಿ ಎಂದು ಹೇಳಿ. He has quoted my name. He must control himself.

ಅಧ್ಯಕ್ಷರು: ಆಯಿತು.

ಶ್ರೀ ಎನ್. ಚಲುವರಾಯಸ್ವಾಮಿ: ನಾನೂ ಹೆಚ್ಚು ಮಾತನಾಡಬೇಕಾಗುತ್ತದೆ. ಸರಿಯಾದ ರೀತಿಯಲ್ಲಿ ಮಾತನಾಡಿ ಎಂದು ತಾವು ಅವರಿಗೆ ಆದೇಶ ಕೊಡಿ ಎಂದು ನಾನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಾನು ಹೆಚ್ಚು ಮಾತನಾಡಬೇಕಾಗುತ್ತದೆ. ** ನಾನು ಅವರಿಂದ ಪಾಠ ಕಲಿಯಬೇಕಾಗಿಲ್ಲ.

(ಅಡಚಣೆ)

ಶ್ರೀ ಎ. ಕೃಷ್ಣಪ್ಪ: ಅದೇನು ಹಗರಣವೆಂದು ಅವರು ಈಗ ಹೇಳಬೇಕು. ಅದು ದಾಖಲೆಗೆ ಹೋಗಿದೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ: ಏನು ಹಗರಣವೆಂದು ಅವರು ಹೇಳಬೇಕು.

(ಅಡಚಣೆ)

ಅಧ್ಯಕ್ಷರು: ಕೃಷ್ಣಪ್ಪನವರೆ, ಯಾವುದಾದರೂ unparliamentary words ಇದ್ದರೆ, ಅದನ್ನು ತೆಗೆದು ಹಾಕಿಸುವುದಕ್ಕೆ ನೋಡುತ್ತೇನೆ. ದಯಮಾಡಿ ಕೇಳಿ. ನೀವು ನೀವೇ ನಿಂತುಕೊಂಡು ಬೈದಾಡಿಕೊಂಡರೆ, ನಾನೇನು ಮಾಡಲಿ? ಯಾರಾದರೂ unparliamentary ಪದಗಳನ್ನು ಉಪಯೋಗಿಸಿದ್ದರೆ, ನಾನು ನೋಡಿ ತೆಗಿಸಿ ಹಾಕುತ್ತೇನೆ.

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ಗೌರವದಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲಿ ಯಾವುದೇ ವಿಷಯ ಬಂದಾಗ, ಸಂದರ್ಭ ಬಂದಾಗ ಸದಸ್ಯರನ್ನು ಹೆದರಿಸತಕ್ಕಂಥಾದ್ದು ಮಾಡಬಾರದು. ಬ್ಲಾಕ್‌ಮೇಲ್ ಮಾಡಬಾರದು. ** ಎಂದರೆ, ಏನು ಹಗರಣ ಇದೆ? ನಿಮ್ಮ ಕೈಯಲ್ಲಿ ಅಧಿಕಾರ ಇದೆ, ಏಕೆ ಸುಮ್ಮನೆ ಕುಳಿತುಕೊಂಡಿದ್ದೀರಿ? ಎಲ್ಲರನ್ನೂ ಜೈಲಿಗೆ ಹಾಕಿರಿ. ** ಅದು ಹೊರಗಡೆ ಬರಲಿ. ಪದೇ ಪದೇ ಮಾತು ಬಂದಾಗ ಖೇಣಿಯವರದ್ದು, ಗಣಿಯದ್ದು, ಯಾವುದಾದರೂ ಬಂತು, ** ಎಂತಲೂ ಮತ್ತೆ ಯಾವುದಾದರೂ 'ನೀವು ಅನ್ಯಾಯ ಮಾಡಿದ್ದೀರಿ' ಎಂದು oppositionನವರು ಏನಾದರೂ ಹೇಳಿದರೆ, 'ನಾವು ನೋಡಿಕೊಳ್ಳುತ್ತೇವೆ, ಯಾರು ಏನೇನು ಮಾಡುತ್ತಾರೆ' ಎನ್ನುವುದಾದರೆ... ಅಂದರೆ, ಈ ರೀತಿ ಹೆದರಿಸಿ ನೀವು ಸದನ ನಡೆಸಬೇಕೆಂದಿದ್ದೀರಾ? ಸರ್ಕಾರ ನಡೆಸಬೇಕೆಂದಿದ್ದೀರಾ? ವಿರೋಧ ಪಕ್ಷದವರನ್ನು ಈ ರೀತಿ ಕಂಟ್ರೋಲ್‌ನಲ್ಲಿಟ್ಟು, ದಬ್ಬಾಳಿಕೆ ಮಾಡಿ, ಅವರು ಹೇಳತಕ್ಕಂಥ ವಿಷಯಗಳಿಗೆ ಸಪ್ರೆಸ್ ಮಾಡತಕ್ಕಂಥಾದ್ದು ಆಗಲಿ, ಅಧ್ಯಕ್ಷರೆ, ಇದು ಬಹಳ ದಿವಸ ನಡೆಯುವುದಿಲ್ಲ. ನಾವು ನೋಡಿದ್ದೇವೆ. ಈ ಸದನದಲ್ಲಿ ಅನೇಕ ಜನರು ಇದೇ ರೀತಿಯಾಗಿ....

(ಅಡಚಣೆ)

ಅಧ್ಯಕ್ಷರು: ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ದಯವಿಟ್ಟು ಬ್ಲಾಕ್‌ಮೇಲ್ ತಂತ್ರ, ಹೆದರಿಸುವುದನ್ನು ಯಾರೂ ಕೂಡ ಮಾಡಬಾರದು. ಒಂದು ವೇಳೆ ನಿಮಗೆ ಮಾಡಬೇಕೆಂದಿದ್ದರೆ, ತಾಕತ್ತು ಇದ್ದರೆ ಮಾಡಿ, ಆಗಲಿ. ಅದು ಬಿಟ್ಟು ಪದೇ ಪದೇ ** ಎಂದು ಹೇಳುವುದು, ಯಾವುದಾದರೊಂದು ಮಾತು ಬಂದರೆ, ಸೂಚ್ಯವಾಗಿ ಆಡಿದರೂ... ಅವರು ತಮ್ಮ ಗಮನ ಸೆಳೆದಿದ್ದಾರೆ. ತಮ್ಮನ್ನು ಕೇಳತಕ್ಕಂಥ ಹಕ್ಕು ಅವರಿಗೆ ಇದೆ. ಅದು ಬಿಟ್ಟು ** ಎಂದು... ಅಂದರೆ, ಒಬ್ಬೊಬ್ಬರ character assassination ಮಾಡುವುದಕ್ಕೆ ಇಲ್ಲಿ ಬಂದಿದ್ದೇವೆಯೇ? ಒಬ್ಬರ ಮೇಲೊಬ್ಬರು ಚಾಡಿ ಹೇಳುವುದಕ್ಕೆ ಬಂದಿದ್ದೇವೆಯೇ ಅಥವಾ ಒಬ್ಬೊಬ್ಬರನ್ನು ತೇಜೋವಧೆ ಮಾಡುವುದಕ್ಕೆ ಇಲ್ಲಿ ಸೇರಿದ್ದೇವೆಯೇ? ದಯವಿಟ್ಟು ತಾವು ಇದರ ಬಗ್ಗೆ ಹೇಳಬೇಕು. ಇವೊತ್ತು ನಮ್ಮ ಕಡೆ ಇರಬಹುದು ಅಥವಾ ಆ ಕಡೆ ಇರಬಹುದು ತಾವು ಸ್ಪಷ್ಟವಾಗಿ ಅವರಿಗೆ ಹೇಳಬೇಕು. ಅದು ಬಿಟ್ಟು ಕೆಲವು ಸಲ ಏನಾಗುತ್ತದೆಂದರೆ, ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ಪ್ರಕಾಶ್‌ರವರು ಹೇಳಿದರು. ನೀವು ಕೊಟ್ಟಂತಹ ನಿರ್ಣಯಕ್ಕೆ ನಾವು ತಲೆ ಬಾಗುತ್ತೇವೆ. ಅದರ ಬಗ್ಗೆ ಏನೂ ಇಲ್ಲ. ಆದರೆ, ಪದೇ ಪದೇ ಕೇಳುತ್ತಿರುತ್ತೇವೆ. ನಮ್ಮ ಮಾತುಗಳಿಂದ ನಿಮ್ಮನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಆದರೆ,

---

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇವೊತ್ತು ಏನಾಯಿತೆಂಬುದು ತಮಗೂ ಗೊತ್ತಿದೆ. ಕಾರಣ ಇಲ್ಲದೆ ನಾವು 11.00ಕ್ಕೆ ಸೇರುವುದು. 12.25 ಗಂಟೆಗೆ ಬೆಲ್ ಕೂಡ ಇಲ್ಲ. ಇದೇನು ರೂಲ್ಸ್ ಪ್ರಕಾರ ಇದೆಯೇ? Naturally, ಇದನ್ನು ಚಾಲೆಂಜ್ ಮಾಡುವುದಕ್ಕಾಗುವುದಿಲ್ಲವೆಂದಲ್ಲ. ಅಂದರೆ, This is a mis-use of power. 'ನನಗೆ ಅಧಿಕಾರ ಇದೆ' ಅಂದ ತಕ್ಷಣ ನಾವೆಲ್ಲರೂ judiciously behave ಮಾಡಬೇಕೋ ಏನೋ ಅಧಿಕಾರ ಇದೆಯೆಂದು ನಾವು ಅದನ್ನು ದುರುಪಯೋಗ ಮಾಡಿಕೊಳ್ಳಬೇಕೋ. ಇದನ್ನು ನಾವು ಪ್ರಸ್ತಾಪಿಸಿದಾಗ ತಾವು ಅನೇಕ ಸಲ ** ಅಂತಲೋ, ಇಲ್ಲವೇ ವಿಷಯದ ಬಗ್ಗೆ ವಿಸ್ತಾರವಾಗಿ ಮಾತನಾಡುವುದಕ್ಕೂ ನಮಗೆ ಅವಕಾಶ ಮಾಡಿಕೊಡುವುದಿಲ್ಲ. ದಯವಿಟ್ಟು ಇಂಥಾದ್ದು ಆಗಬಾರದು. ಈಗ ಚಾಲೆಂಜ್ ಮಾಡಿಕೊಳ್ಳುತ್ತಾ ಹೋದರೆ, ಒಬ್ಬರಿಗೊಬ್ಬರು ಕುಸ್ತಿ ಆಡಬೇಕಾಗುತ್ತದೆ. ಆನಂತರ, ಎಂದು ಅವರು ಹೇಳಿರುವುದು ಕಡತಕ್ಕೆ ಹೋಗಿದೆ. ಅದನ್ನು ತಾವು ದಯವಿಟ್ಟು ತೆಗೆಸಬೇಕು.

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೆ, ಈಗ ಯಾರೇ ಆಗಲಿ ನಿಜ, ಕೆಲವು ಸಾರಿ tensed atmosphere ಬರುತ್ತದೆ. ಆದರೆ ತೂಕ ತಪ್ಪಿ ಯಾರೂ ಮಾತನಾಡಬಾರದು. ತೂಕ ತಪ್ಪಿ ಮಾತನಾಡಿದರೆ ಜನ ಏನು ತಿಳಿದುಕೊಳ್ಳುತ್ತಾರೆ? ದಯಮಾಡಿ ಯಾರೇ ಆಗಲಿ, ನೀವು ನಿಮ್ಮ parliamentary words ಉಪಯೋಗಿಸಿ ಏನು ಹೇಳಬೇಕೋ, ಯಾವ ರೀತಿ ಚುಚ್ಚಬೇಕೋ ಚುಚ್ಚಿರಿ. ಅದನ್ನು ಬಿಟ್ಟು ಈ ರೀತಿ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡುವುದು ಸರಿಯಲ್ಲ. ಮಾನ್ಯ ಚಲುವರಾಯಸ್ವಾಮಿಯವರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ದಯಮಾಡಿ ಒಂದು ನಿಮಿಷ, ನಾನು ಕ್ಲಾರಿಫೈ ಮಾಡಿಬಿಡುತ್ತೇನೆ. ಮಾನ್ಯ ಸಭಾ ನಾಯಕರು ಎದ್ದು ನಿಂತುಕೊಂಡಾಗ, ಈ ಸದನದಲ್ಲಿ ನಾನು ಎರಡನೇ ಬಾರಿಗೆ ಸದಸ್ಯನಾಗಿದ್ದೇನೆ. ಬಹುಶಃ ನಾವು ಆ ಕಡೆಗೆ ಕುಳಿತಿದ್ದಾಗ ಯಾವತ್ತೂ ಸಹ ಮಧ್ಯೆ ನಿಂತು ಚಕಾರ ಎತ್ತುತ್ತಿರಲಿಲ್ಲ. ಮಾನ್ಯ ಸಭಾನಾಯಕರು ಎದ್ದಾಗ, ಅವರು ಯಾವ ರೀತಿ ನಡೆದುಕೊಂಡರು ಎನ್ನುವುದನ್ನು ತಾವು ಗಮನಿಸಿ ಉತ್ತರ ಕೊಡಬೇಕಾಗುತ್ತದೆ. ನಮ್ಮ Law and Parliamentary Affairs Minister ಎದ್ದು ನಿಂತುಕೊಂಡು ಉತ್ತರ ಕೊಡಬೇಕಾದರೆ, ಬಹುಶಃ ಅವರು ಮಾತನಾಡಿದ ನಂತರ ಅವರು ತಮ್ಮ ಅನುಮತಿ ಕೇಳಿ ಉತ್ತರ ಕೊಡಲಿ. ಈ ರೀತಿ ಆದರೆ, ನಾವೂ ಸಹ ಸಹಿಸಲಿಕ್ಕಾಗುವುದಲ್ಲ. ನಾವು ಮಾತನಾಡಬೇಕಾದರೆ ಕೈ ತೋರಿಸಿ, ಏಕವಚನದಲ್ಲಿ ಉಪಯೋಗಿಸಿದಾಗ, ನಾವು ಇಲ್ಲಿ ಕುಳಿತುಕೊಂಡು ಸರ್ಕಾರ ನಡೆಸುತ್ತೇವೆ, ಆಡಳಿತ ಪಕ್ಷದಲ್ಲಿದ್ದೇವೆ, ನಾವು ವಿರೋಧ ಪಕ್ಷದವರಿಗೆ ಹೆಚ್ಚು

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅವಕಾಶ ಕೊಡತಕ್ಕಂಥದ್ದು ಟೀಕೆಗೆ ಅವಕಾಶ ಕೊಡತಕ್ಕಂಥದ್ದು, ಹೇಳತಕ್ಕಂಥದ್ದು ಎಲ್ಲವೂ ಸಹ ಗೊತ್ತಿದೆ, ಅದನ್ನು ಕೇಳುತ್ತೇವೆ. ಆದರೆ ಎಲ್ಲವನ್ನೂ ಸಹ ಅವರು ನಾವು ಇಲ್ಲಿ ಕುಳಿತಿದ್ದೇವೆ ಎನ್ನುವಂತಹ ಒಂದೇ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಅವರು ಏನು ಬೇಕಾದರೂ ಮಾತನಾಡುತ್ತೇವೆ ಎನ್ನುವುದಾದರೆ ನಮಗೆ ಅದನ್ನು ಕೇಳಲಿಕ್ಕಾಗುವುದಿಲ್ಲ, ಅಧ್ಯಕ್ಷರೇ

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಸತ್ಯಕ್ಕೆ ದೂರವಾದಂತಹ ಮಾತನ್ನು ಆತ ಈಗ ಹೇಳಿದ್ದಾರೆ. ಅದೇನೆಂದರೆ, ಮಾನ್ಯ ಸಭಾನಾಯಕರು ಎದ್ದಾಗ, ನಾನು ಎದ್ದು ನಿಲ್ಲಲ್ಲಿಲ್ಲ....

(ಅಡಚಣೆ)

ಅಧ್ಯಕ್ಷರು: ದಯಮಾಡಿ ಅವರು ಏನು ಹೇಳುತ್ತಾರೋ ಕೇಳಿ.

SRI A. KRISHNAPPA: Don't put words. ಮಾನ್ಯ ಈಶ್ವರಪ್ಪನವರು ಮಾತನಾಡುವಾಗ ಸದನದ 225 ಜನರು ಸೇರಿಸಿಕೊಂಡು ನೀವು ಮಾತನಾಡಬೇಡಿ.

(ಅಡಚಣೆ)

ಶ್ರೀ ಎಂ.ಟಿ. ಕೃಷ್ಣಪ್ಪ: ... ಗೌರವವಾಗಿ ಮಾತನಾಡಲಿಕ್ಕೆ ಹೇಳಿ...

(ಅಡಚಣೆ)

ಅಧ್ಯಕ್ಷರು: ಆಯಿತು, ಈ ತರಹ ಆದರೆ ಹೇಗೆ? ಅವರೇನೋ ಅವರ ವಿಚಾರ ಹೇಳಬೇಕೆಂದಿದ್ದಾರೆ. ಮಾನ್ಯ ಚೆಲುವರಾಯಸ್ವಾಮಿಯವರು ಹೇಳಿದ್ದಕ್ಕೆ ಅವರು ಉತ್ತರ ಹೇಳುತ್ತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಅಧ್ಯಕ್ಷರು: ಅವರು ಮಾತನಾಡುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ: ತಾವು ಎರಡೂವರೆ ವರ್ಷಗಳ ಕಾಲ ಅಲ್ಲಿ ಕುಳಿತು ನನ್ನನ್ನು ನೋಡಿದ್ದೀರಿ. ನಾನು ಪದೇ ಪದೇ irresponsible ಆಗಿ ಎದ್ದು ನಿಂತು interfere ಆಗುವುದು, ಯಾರೋ ಮಾತನಾಡುವಾಗ ಅದಕ್ಕೆ ಏನೋ ಆಭಾಸವಾಗಿ ಮಾತನಾಡುವುದು, ಆ ರೂಢಿ ಅಥವಾ ಆ culture ನನಗಿಲ್ಲ. ಆ culture ಕಡೆ ಯಾರಿಗಾದರೂ ಇರಬಹುದು. We will limit ourselves....

(ಅಡಚಣೆ)

ಶ್ರೀ ಎ. ಕೃಷ್ಣಪ್ಪ: ..... ನನಗೆ ಆಶ್ಚರ್ಯವಾಗುತ್ತಿದೆ, ಮಾನ್ಯ ಈಶ್ವರಪ್ಪನವರು ಹೇಳಿದಾಗ ನಾನು ಎದ್ದು ನಿಂತು ಹೇಳಿದ್ದು ನಿಜ. ಆದರೆ ಮಾತಿಗೆ ಮಾತು ಬಂದಾಗ ಕೈ ತೋರಿಸಿದ್ದಾಗಲಿ, ನನ್ನ ಹೆಸರೇಳಿದ್ದಾಗಲಿ, ಮೊದಲು ಆತ. ಇದು ಸತ್ಯ. ಎರಡನೆಯದಾಗಿ, ಏನಾದರೂ ನಾನು ಆ ರೀತಿಯಾಗಿ ಅಶಿಸ್ತಿನಿಂದ ನಡೆದುಕೊಂಡಿದ್ದರೆ, ನಾನು ಆಕಸ್ಮಾತ್ ತಪ್ಪು ಮಾಡಿದ್ದರೆ, ಅದನ್ನು ನಿಮ್ಮ ಗಮನಕ್ಕೆ ತರಬೇಕು, ನಿಮ್ಮ ಮುಖಾಂತರ ಅದನ್ನು ಸರಿಮಾಡಿಕೊಳ್ಳಬೇಕು. ** ಇದೇ

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಸದನದಲ್ಲಿ ಒಂದು ಗಂಟೆ ಎಂಟು ನಿಮಿಷ ವೀರಾವೇಶದಲ್ಲಿ ಉತ್ತರ ಕೊಟ್ಟಿದ್ದೇನೆ. ಆವತ್ತು ವಿರೋಧ ಪಕ್ಷದಲ್ಲಿದ್ದಂತಹ ಮಹನೀಯರು 14 ಜನ ಭಾಷಣ ಮಾಡಿದ್ದಾರೆ. Auditor General of Indiaದವರು enquiry ಮಾಡಿ report ಕೊಟ್ಟಿದ್ದಾರೆ. ಲೋಕಾಯುಕ್ತರವರು statements ಕೊಟ್ಟಿದ್ದಾರೆ, ಎಲ್ಲಾ ಆಗಿದೆ. ಮಾನ್ಯ ಅಧ್ಯಕ್ಷರೆ, ನಾನು ಇವತ್ತು ನಿಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಅವರಿಗೆ ತಾಕತ್ತು ಇದ್ದರೆ, ತಾಕತ್ತು ಇದ್ದರೆ, ಅವರು ಏನು enquiry ಮಾಡಬೇಕೋ ಮಾಡಲಿ. ಅವರೇ ಸರ್ಕಾರ ನಡೆಸುತ್ತಿದ್ದಾರೆ, ಅವರು ಮಾಡಬಹುದು. ಪದೇ ಪದೇ ಈ ರೀತಿ ಮಾತನಾಡುವುದು, ಅವಹೇಳನ ಮಾಡುವುದು, ಇವರಿಗೆ ಯೋಗ್ಯವಾದಂತಹ ವಿಚಾರವಲ್ಲ. ಕಡತದಿಂದ ಅದನ್ನು ತೆಗೆಯಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ದಾಖಲೆ ನೋಡಿ, parliamentary and unparliamentary ಆಗಿರುವುದು ಎಲ್ಲವನ್ನೂ ತೆಗೆಸಿ ಬಿಡುತ್ತೇನೆ.

(ಅಡಚಣೆ)

MR. SPEAKER: Parliamentary ಅಲ್ಲ, unparliamentary words ತೆಗೆಸಿ ಹಾಕುತ್ತೇನೆ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು parliamentary ಆಗಿರುವುದನ್ನೂ ಸಹ ಕಡತದಿಂದ ತೆಗೆದರೆ, ನಾವು adjournment motion ಮೇಲೆ ಮಾತನಾಡಿದ್ದು ಸಹ ಹೋಗುತ್ತದೆ. ಆದ್ದರಿಂದ, ತಾವು ದಯವಿಟ್ಟು unparliamentary ಆಗಿರುವುದನ್ನು ಮಾತ್ರ ತೆಗೆಯಿರಿ.

MR. SPEAKER: Unparliamentary ಆಗಿರುವುದನ್ನು ತೆಗೆಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, ಇಡೀ ಕರ್ನಾಟಕ ರಾಜ್ಯದ ಜನ ಇವತ್ತು ಸದನದ ಕಲಾಪ ನೋಡುತ್ತಿರುವಂತಹ ಸಂದರ್ಭದಲ್ಲಿ, ಮಾಜಿ ಮುಖ್ಯಮಂತ್ರಿಗಳು, ಈಗಿನ ವಿರೋಧ ಪಕ್ಷದ ನಾಯಕರು ಹೇಳಿದಂತಹ ಒಂದು ವಾಕ್ಯ ನಮ್ಮೆಲ್ಲರಿಗೂ ಕೂಡ ಆಶ್ಚರ್ಯವಾಗಿದೆ. ಅವರು ಏನು ಹೇಳಿದರು ಎಂದರೆ....

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: .... ಅವರು ಏನು ಹೇಳಿದರು ಎಂದು ಹೇಳುವುದಕ್ಕಾದರೂ ಬಿಡಿ. ಅವರು ಏನು ಹೇಳಿದರು ಎಂದರೆ, ತಾವು ಸಭಾಧ್ಯಕ್ಷರಾಗಿ ಅನೇಕ ತೀರ್ಪುಗಳನ್ನು ಕೊಟ್ಟಿದ್ದೀರಿ, ವಿರೋಧ ಪಕ್ಷದವರಾದ ನಮಗೆ ಅನೇಕ ಬಾರಿ ಅನ್ಯಾಯಗಳನ್ನು ಮಾಡುತ್ತಿದ್ದೀರಿ, ಈ ರೀತಿ ನೇರವಾಗಿ ನಿಮ್ಮ ಮೇಲೆ ಅವರು charge ಮಾಡಿದ್ದಾರೆ....

SRI D.K. SHIVAKUMAR: We stand by it.

ಅಧ್ಯಕ್ಷರು: ದಯಮಾಡಿ ಅವರು ಏನು ಹೇಳುತ್ತಾರೆಂದು ಕೇಳೋಣ ಇರಿ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: .... ಮಾನ್ಯ ಅಧ್ಯಕ್ಷರೆ, ನನ್ನ ಮಾತನಾಡುವ ಹಕ್ಕನ್ನು ಯಾರೂ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ನಾನು ಮಾತನಾಡುತ್ತೇನೆ? ನೀವ್ಯಾರು ಕೇಳುವುದಕ್ಕೆ? ನಾನು ಮಾತನಾಡೇ ತೀರುತ್ತೇನೆ. ನಾನು ಮಾತನಾಡುವ ಹಕ್ಕನ್ನು ನಿಮ್ಮ ಅಪ್ಪನಿಂದಲೂ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ಏನು ಮಾತನಾಡುತ್ತಿದ್ದೀರಿ? ಇದನ್ನೆಲ್ಲಾ ಬಿಟ್ಟುಬಿಡಿ. ನಿಮಗೆ ಮಾತನಾಡುವುದಕ್ಕೆ ಮಾತ್ರ ಪೂರ್ಣ ಸ್ವಾತಂತ್ರ್ಯ ಇದೆ, ನಮಗೆ ಸ್ವಾತಂತ್ರ್ಯ ಇಲ್ಲವೇ? ಕುಳಿತುಕೊಳ್ಳಿ ಸಾಕು.

ಅಧ್ಯಕ್ಷರು: ಈ ತರಹ ಮಾತನಾಡಿದರೆ ಏನು ಪ್ರಯೋಜನ ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ: ... ಇವೆಲ್ಲಾ ನಡೆಯುವುದಿಲ್ಲ. ಕುಳಿತುಕೊಳ್ಳಿ, ಅದೇನು ಮಾಡುತ್ತೀರಿ?....

ಅಧ್ಯಕ್ಷರು: ಇಲ್ಲಿ ಯಾರೂ ಮಾತನಾಡುವುದೂ ಕೇಳುವುದಿಲ್ಲ ಮತ್ತು ಯಾವುದೂ ಸಹ ರೆಕಾರ್ಡ್‌ಗೆ ಹೋಗುತ್ತಿಲ್ಲ. ಈ ರೀತಿ ಮಾತನಾಡಿದರೆ ಏನು ಪ್ರಯೋಜನ?

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವ ಹಕ್ಕು ಇದೆ. ನನ್ನ ಮಾತನಾಡುವ ಹಕ್ಕನ್ನು ಕಸಿದುಕೊಳ್ಳಲಿಕ್ಕೆ ಇಲ್ಲಿ ಯಾರಿಗೂ ಹಕ್ಕಿಲ್ಲ. ನಾನೇನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ನನ್ನ ಹಕ್ಕನ್ನು ಕಸಿದುಕೊಳ್ಳಲಿಕ್ಕೆ ಇವರ್ಯಾರಿಗೂ ಹಕ್ಕು ಇಲ್ಲ. ನಾನೇನು....

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೆ, ದಯವಿಟ್ಟು ನನ್ನ ಕಡೆಗೆ ತಿರುಗಿ ಮಾತನಾಡಿ. ಪರಸ್ಪರ ನೀವು ನೀವೇ ಏಕೆ ಮಾತನಾಡುತ್ತೀರಿ?...

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಹೇಳಲಿಕ್ಕೆ ಹೊರಟಿರುವ ಅಂಶಕ್ಕೆ ಮತ್ತೆ ಮತ್ತೆ ಅವರು ಪುಷ್ಟಿ ಕೊಡುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷ ಸ್ಥಾನದಿಂದ ಅನ್ಯಾಯವಾಗಿದೆ ಎಂದು ನಾನು ಹೇಳಿದಂತಹ ಮಾತನ್ನು ಅವರು ಮತ್ತೆ ಮತ್ತೆ ಒತ್ತಿ ಒತ್ತಿ ಹೇಳುತ್ತಿದ್ದಾರೆ.....

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ರಮೇಶ್‌ಕುಮಾರ್‌ರವರು ದಯವಿಟ್ಟು ಎದ್ದು ಹೋಗಬಾರದು. ಮಾನ್ಯ ಅಧ್ಯಕ್ಷರೆ, ಹೇಳುವುದಕ್ಕೆ ಶಾಸ್ತ್ರ, ತಿನ್ನುವುದಕ್ಕೆ

ಬದನೇಕಾಯಿ ಎನ್ನುವಂತಹ ವ್ಯವಸ್ಥೆ ಇದು. ನಾನು ಹೇಳುವುದಕ್ಕೇ ಇವರು ಅವಕಾಶ ಕೊಡುತ್ತಿಲ್ಲ. ಚೀರುತ್ತೀರಿ, ಕೂಗಾಡುತ್ತೀರಿ, ಘೋಷಣೆಗಳನ್ನು ಕೂಗುತ್ತೀರಿ, ಇದು ಕಾಂಗ್ರೆಸ್ ಸಂಸ್ಕೃತಿಯೇ? ನನಗೆ ಹೇಳುವುದಕ್ಕೆ ಅವಕಾಶ ಕೊಡಿ. ನನಗೆ ಮಾತನಾಡುವುದಕ್ಕೇ ನೀವು ಬಿಡದಿದ್ದರೆ ಹೇಗೆ?

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಈಶ್ವರಪ್ಪನವರೆ....

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ನಾನು ಪೂರ್ಣ ಮಾತನಾಡಲೋ ಅಥವಾ ಅವರಿಗೆ ಬಿಡಲೋ?

ಅಧ್ಯಕ್ಷರು: ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಏಮು ಹೇಳಲಿಕ್ಕೆ ಹೊರಟ್ಟಿದ್ದೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳಾಗಿದ್ದರು, 6–8 ಬಾರಿ ಗೆದ್ದಿರುವವರು, ಈ ಸದನದ ಬಗ್ಗೆ ಮಾನ್ಯ ಸಭಾಧ್ಯಕ್ಷರ ಪೀಠದ ಬಗ್ಗೆ ಅಗೌರವವನ್ನು ಮೇಲಿಂದ ಮೇಲೆ ತೋರಿಸುತ್ತಾ, ನಾನು ಹೇಳುತ್ತಿರುವುದಕ್ಕೆ ಮತ್ತೆ ಮತ್ತೆ ಅವರು ಪುಷ್ಟಿ ನೀಡುತ್ತಿದ್ದಾರೆ. ನಾನು ಅದಕ್ಕೋಸ್ಕರ ಇಲ್ಲಿ ಹೇಳಲಿಕ್ಕೆ ಹೊರಟಿದ್ದು ಏನೆಂದರೆ,....

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ....ನನಗೆ ಮಾತನಾಡುವುದಕ್ಕೆ ಬಿಡಿ. ಅದಕ್ಕೆ ನೀವು ಹೌದು ಎಂದಾದರೂ ಹೇಳಿ ಅಥವಾ ವಿರೋಧವನ್ನಾದರೂ ಮಾಡಿ.

ಶ್ರೀ ಆರ್. ದಿನೇಶ್ ಗುಂಡೂರಾವ್: ನೀವು ಹೇಳುತ್ತಿರುವುದು ಸತ್ಯವಾಗಿದೆ.

ಅಧ್ಯಕ್ಷರು: ಅವರು ಮಾತನಾಡಲಿಕ್ಕೆ ಅವಕಾಶ ಕೊಡಿ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ... ಇದು ಕಾಂಗ್ರೆಸ್ ಪಕ್ಷದ ಸಂಸ್ಕೃತಿಯಾಗಿದೆ. ಬೇರೆಯವರು ಮಾತನಾಡುವಂತಹ ಹಕ್ಕನ್ನು ಕಸಿದುಕೊಳ್ಳುವಂತಹ ವ್ಯವಸ್ಥೆ ಕಾಂಗ್ರೆಸ್ ಪಕ್ಷದಲ್ಲಿದೆ.....

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ..... ಬಿಜೆಪಿ ಸಂಸ್ಕೃತಿ ಅಲ್ಲ, ಹೇಳಿ ನಿಮ್ಮ ಜನಾರ್ಧನರೆಡ್ಡಿಗೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನನ್ನನ್ನು ನಿಮ್ಮ ನಾಗರೀಕರು ಚುನಾವಣೆಯಲ್ಲಿ ಗೆಲ್ಲಿಸಿ, ಅವರ ಪರವಾಗಿ ಮಾತನಾಡುವಂತಹ ಹಕ್ಕನ್ನು ನನಗೆ ಕೊಟ್ಟಿದ್ದಾರೆ. ನನ್ನ ಹಕ್ಕನ್ನು ಕಸಿದುಕೊಳ್ಳಲಿಕ್ಕೆ ಕಾಂಗ್ರೆಸ್ ಪಾರ್ಟಿಗೆ ಸಾಧ್ಯವೇ ಇಲ್ಲ. ಈ ಮಾತನ್ನು ನಾನು ಮತ್ತೆ ಮತ್ತೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನೇನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ಮಾನ್ಯ ವಿರೋಧ ಪಕ್ಷದ

ನಾಯಕರು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ನೇರವಾಗಿ ಸಭಾಧ್ಯಕ್ಷರ ಪೀಠದ ಮೇಲೆ ಆಪಾದನೆ ಮಾಡುತ್ತಿರುವಂತಹ ಸಂದರ್ಭದಲ್ಲಿ, ಇದನ್ನು ಕರ್ನಾಟಕ ರಾಜ್ಯದ ಜನ ನೋಡುತ್ತಿದ್ದಾರೆ. ಇದನ್ನು ತುಂಬಾ ಸ್ಪಷ್ಟವಾಗಿ ನಾವೆಲ್ಲರೂ ಸೇರಿ ಖಂಡನೆ ಮಾಡುತ್ತೇವೆ. ಸಭಾಧ್ಯಕ್ಷ ಸ್ಥಾನಕ್ಕೆ ನಾವು ಗೌರವವನ್ನು ಕೊಡುತ್ತೇವೆ. ಈ ಸದನದಲ್ಲಿ ಸಭಾಧ್ಯಕ್ಷರ ಸ್ಥಾನವನ್ನು ಪ್ರಶ್ನೆ ಮಾಡುತ್ತಾ, ನೀವು ಹೇಳುವಂತಹ ತೀರ್ಪನ್ನು ಅನ್ಯಾಯ ಎಂದು ಹೇಳುವುದಾದರೆ, ಇಲ್ಲಿ ಅವರು ಏಕೆ ಕುಳಿತುಕೊಳ್ಳಬೇಕು? ಇಲ್ಲಿ ಕುಳಿತುಕೊಳ್ಳುವ ಯೋಗ್ಯತೆಯೂ ನಿಮಗಿಲ್ಲ. ಇವರು ಮುಖ್ಯಮಂತ್ರಿಗಳಾಗಿದ್ದಾಗ, ವಿರೋಧ ಪಕ್ಷದಲ್ಲಿ ನಾವಿದ್ದಾಗ, ಸದನವನ್ನು ಇವರು ಎಷ್ಟು ಬಾರಿ 2–3 ಗಂಟೆ ತಡವಾಗಿ ನಡೆಸಿದ್ದಾರೆ. ಬೇಕಾದಷ್ಟು ಅಂತಹ ಉದಾಹರಣೆಗಳಿವೆ. ಇವತ್ತು ಒಮ್ಮೆ ತಾವು ಈ ಸಭಾಧ್ಯಕ್ಷ ಸ್ಥಾನದಿಂದ ಇವತ್ತಿನ ಪರಿಸ್ಥಿತಿಗೆ ತಕ್ಕಂತೆ ಒಂದು ಗಂಟೆ ತಡವಾಗಿದ್ದಕೋಸ್ಕರ, ಕಾನೂನನ್ನು ಇವರು ಹೇಳುತ್ತಿದ್ದಾರಲ್ಲಾ, ಇವರಿದ್ದಾಗ ಎಷ್ಟು ಬಾರಿ ಈ ಕೆಲಸವನ್ನು ಅವರು ಮಾಡಿಲ್ಲ? ಎಷ್ಟು ಬಾರಿ ಈ ಕೆಲಸವನ್ನು ನೀವು ಮಾಡಿರಲಿಲ್ಲ? ಇವರು ಮಾಡಿದ್ದು ಪೂರಾ ನ್ಯಾಯ, ಬೇರೆಯವರದೆಲ್ಲಾ ಅನ್ಯಾಯವೇ? ಇವರ ಪರವಾಗಿ ತೀರ್ಪು ಸಿಕ್ಕರೆ ನ್ಯಾಯ, ಇವರ ಪರವಾಗಿ ತೀರ್ಪು ಸಿಗದಿದ್ದರೆ ಅನ್ಯಾಯ.....

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: .... ಮಾನ್ಯ ಅಧ್ಯಕ್ಷರೆ, ನಾನು ಹೇಳಲಿಕ್ಕೆ ಹೊರಟಿದ್ದು ಏನೆಂದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ಆಡಳಿತ ನಡೆಸುತ್ತಿರುವಂತಹ ಸಂದರ್ಭದಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಮಾಡುತ್ತಿರುವಂತಹ ವ್ಯವಸ್ಥೆ, ರಾಜ್ಯದ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ಕುಮಾರಸ್ವಾಮಿಯವರು ಮತ್ತು ಯಡಿಯೂರಪ್ಪನವರು, ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುತ್ತಿರುವುದನ್ನು ಇವರಿಗೆ ಸಹಿಸಲಿಕ್ಕಾಗುತ್ತಿಲ್ಲ. ಹೀಗಾಗಿ....

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ತಾವೇನು ತೀರ್ಪು ಕೊಟ್ಟಿದ್ದೀರೋ, ಈ ತೀರ್ಪು ಅವರ ವಾದಕ್ಕೆ ವಿರುದ್ಧವಾದ ತಕ್ಷಣ, ಇದು ಅವರಿಗೆ ಅನ್ಯಾಯವಾಗಿ ಕಾಣುತ್ತದೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಪೂರ್ಣ ಹೇಳುವುದಕ್ಕೆ ಬಿಡಿ.

ಶ್ರೀ ಎಂ.ಟಿ. ಕೃಷ್ಣಪ್ಪ: ಸ್ಯಾಂಕ್ಷನ್ ಮಾಡುವಾಗ ನೂರಾರು–ಸಾವಿರಾರು ಕೋಟಿ ರೂಪಾಯಿಗಳನ್ನು ನೀವು ಹೊಡಿದಿದ್ದೀರಿ. ನಮ್ಮ ಸರ್ಕಾರವೇನೂ ಸ್ಯಾಂಕ್ಷನ್ ಮಾಡಲಿಲ್ಲ, ಯಾವ ರೀತಿಯೂ ಸ್ಯಾಂಕ್ಷನ್ ಮಾಡಿಲ್ಲ. ಮಾಡಿರುವುದೆಲ್ಲಾ ಕಾಂಗ್ರೆಸ್‌ನವರೇ.

(ಅಡಚಣೆ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು): ಈ ಭಾಗದ ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ನಾನು ಮನವಿ ಮಾಡಲು ಬಯಸುತ್ತೇನೆ, ಸದನದ ನಿಯಮಾವಳಿಯ ಪ್ರಕಾರ ಯಾವ ಚರ್ಚೆಯನ್ನೂ ಬೇಕಾದರೆ ತೆಗೆದುಕೊಳ್ಳಲು ಸಿದ್ದರಿದ್ದೇವೆ. ಅದೇನು ಪಾಪ ಕೂಗುತ್ತಿದ್ದಾರೆ 150 ಕೋಟಿ, ಆಕ್ರೋಶ, ನೋಡುತ್ತಿದ್ದೇನೆ.

(ಅಡಚಣೆ)

ಮಾನ್ಯ ಅಧ್ಯಕ್ಷರೆ, ನಾನು ಸದನದಲ್ಲಿ ಹೆದರಿ ಹೋಗತಕ್ಕ ಪ್ರಶ್ನೆ ಇಲ್ಲ. ಉತ್ತರ ಕೊಡುವುದಕ್ಕೆ ಸಮರ್ಥನಾಗಿದ್ದೇನೆ. ನನ್ನಲ್ಲಿ ಆತ್ಮಸ್ಥೈರ್ಯವೂ ಇದೆ. ನನಗೆ ಸದಸ್ಯರ ಬಲದ, ನೆರಳಿನ ಅವಶ್ಯಕತೆಯು ಇಲ್ಲ. ಈ ಸದನದಲ್ಲಿ 150 ಕೋಟಿ ರೂಪಾಯಿಗಳ ಹಗರಣವೆಂದು ಹೇಳಲು ಹೊರಟಿದ್ದಾರೆ. ದಿನಕರ್ ರಿಪೋರ್ಟ್‌ನಲ್ಲಿ ಸರ್ಕಾರದ ಅಧಿಕಾರಿಗಳು ಹಿಂದಿನ ಪ್ರಕರಣಗಳಲ್ಲಿ ಏನು ಬರೆದಿದ್ದಾರೆ ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಇದರಲ್ಲಿ ಹಲವಾರು ರೀತಿಯ ಪ್ರಕರಣಗಳು ಇದ್ದಾವೆ. ಆದ್ದರಿಂದ ನಿಯಮಾವಳಿಯ ಪ್ರಕಾರ....

ಅಧ್ಯಕ್ಷರು: ನಾನು ವಿರೋಧ ಪಕ್ಷದ ನಾಯಕರು ಮತ್ತು ಇತರ ಸ್ನೇಹಿತರು ಕೊಟ್ಟಿದ್ದ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ. ಅದರ ಬಗ್ಗೆ ಅವರು ಹೇಳಿದ್ದಾರೆ. ನಮ್ಮ ಮುಂದೆ ಅಜೆಂಡಾ ಇದೆ. ಅಜೆಂಡಾದಲ್ಲಿ ಎಲ್ಲಾ ಬೇಡಿಕೆಗಳು ಇದೆ. ಜನರಲ್ ಅಡ್ಮಿನಿಸ್ಟ್ರೇಷನ್, ಅರಣ್ಯ, ಮೈನಿಂಗ್ ಎಲ್ಲದರ ಬಗ್ಗೆ ಮಾತನಾಡಬಹುದು. ಅದನ್ನು ಉಪಯೋಗಿಸಿಕೊಂಡು ಮಾನ್ಯ ಸದಸ್ಯರು ಮಾತನಾಡಬಹುದು. ಅದಕ್ಕೇನೂ ಅಡ್ಡಿ ಇಲ್ಲ. ಇದಲ್ಲದೆ ಇನ್ನೊಂದನ್ನು ಹೇಳಲು ಇಷ್ಟಪಡುತ್ತೇನೆ. ಈಗ ಏನು ಒಂದು ಆಪಾದನೆ ಮಾಡಿರತಕ್ಕವರು ಮೇಲ್ಮನೆಯ ಸದಸ್ಯರು...

(ಅಡಚಣೆ)

ಅಧ್ಯಕ್ಷರು: ದಯಮಾಡಿ ಕೇಳಿ. ಅಲ್ಲಿ ಆ ಮನೆಯ ನಿಯಮ 307 ರ ಪ್ರಕಾರ ಅವರಲ್ಲೇನಾದರೂ ದಾಖಲಾತಿ ಇದ್ದರೆ ಪ್ರೂವ್ ಮಾಡುವುದಕ್ಕೆ ಅಲ್ಲಿ ಛೇರ್ಮನ್‌ಗೆ ಕೊಡಬೇಕಾಗುತ್ತದೆ. ಅದೇನು ಕೊಡುತ್ತಾರೆ ನೋಡೋಣ. ಏನಾದರೂ substance ಇದ್ದರೆ ಯಾವುದಾದರೂ ವಿಚಾರವನ್ನು ಎತ್ತಬಹುದು, ಡಿಸ್‌ಕಸ್ ಮಾಡಬಹುದು. ನೀವೂ ಅಷ್ಟೆ 378ರ ಪ್ರಕಾರ ಏನಾದರೂ ಇದ್ದರೆ ನನ್ನ ಚೇಂಬರ್‌ಗೆ ಕೊಡಿ. ಅದನ್ನು ಪರಿಶೀಲನೆ ಮಾಡುತ್ತೇನೆ. ಈಗ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ. ಬೇಕಾದರೆ ನಿಮ್ಮ ಅಜೆಂಡಾದ ಮೇಲೆ ಮಾತನಾಡಲು ಅವಕಾಶ ಇದೆ. ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಸ್ವಲ್ಪ ಕೇಳಿ. ಕೇಳದೆಯೇ ಏಕೆ ತಳ್ಳಿಹಾಕುತ್ತೀರಿ? ಸ್ವಲ್ಪ ನಮ್ಮ ವಿಚಾರಗಳನ್ನು ಕೇಳಿ ಅದನ್ನು ತಳ್ಳಿಹಾಕಿದರೆ ಸರಿ, ಅದನ್ನು ಕೇಳುವುದಕ್ಕಿಂತ ಮೊದಲೇ ತಳ್ಳಿಹಾಕುತ್ತೇನೆಂದರೆ ಹೇಗೆ?

MR. SPEAKER: There are so many rulings. ಕೇಳತಕ್ಕದ್ದೇನಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಈಗ ನಾವು ಕೇಳದೆಯೇ ತಾವೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಆ ಅಲಿಗೇಷನ್ ಮಾಡಿದಂಥ ವ್ಯಕ್ತಿ ಮೇಲ್ಮನೆಯಲ್ಲಿದ್ದಾರೆ. ಅದಕ್ಕೆ ಆ ವಿಚಾರವನ್ನು ಮೇಲ್ಮನೆಯಲ್ಲಿ ಬೇಕಾದರೆ ಕೇಳಲಿ. ಇಲ್ಲಿ ಆ ವಿಷಯ ಪ್ರಸ್ತಾಪವಾಗುವುದಿಲ್ಲ ಎನ್ನತಕ್ಕ ಮಾತನ್ನು ನೀವೇ ಪ್ರಸ್ತಾಪ ಮಾಡಿದಿರಿ. ಅಂದರೆ ಏನಾಯಿತು ಈವತ್ತು ಮಾಡಿದಂಥ ಆ ಅಲಿಗೇಷನ್ ಅವರು ಏನು ಹೇಳಿದ್ದಾರೆ, ಅದರಲ್ಲಿ ಸತ್ಯಾಂಶವಿದೆ ಎನ್ನತಕ್ಕ ದೃಷ್ಟಿಯಿಂದ ತಾವೂ ಕೂಡ ಸದುದ್ದೇಶದಿಂದ ಈ ಮಾತನ್ನು ಹೇಳಿದ್ದೀರಿ.

ಅಧ್ಯಕ್ಷರು: ಸತ್ಯಾಂಶವೆಂದಲ್ಲ. ಅಲ್ಲಿ ನಿಯಮ 307ರ ಮೇಲೆ ಅವರಲ್ಲಿರತಕ್ಕ ದಾಖಲಾತಿಗಳ ಮೇರೆಗೆ ಮಾಡಬಹುದು. ನೀವು ನಿಮ್ಮಲ್ಲಿ ಏನಾದರೂ ದಾಖಲಾತಿಗಳು ಇದ್ದರೆ 328ರ ಪ್ರಕಾರ ನನಗೆ ಇಲ್ಲಿ ಕೊಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ತಾವು ನಮಗೆ ಅವಕಾಶ ಕೊಡಿ. ಎಲ್ಲಾ ದಾಖಲಾತಿಗಳು ಇದೆ, ಪ್ರಶ್ನೆ ಇಷ್ಟೆ. ನಾವಾಗಲಿ, ಯಾರಿಗಾಗಲಿ, ಅವರ ಚಾರಿತ್ರ್ಯ ವಧೆ ಮಾಡಬೇಕು, ಅವರಿಗೆ ಕೆಟ್ಟದ್ದು ತರಬೇಕು ಎಂಬ ದೃಷ್ಟಿಯಿಂದ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲ. ನಾವು ವಿಷಯ ಪ್ರಸ್ತಾಪ ಮಾಡುತ್ತಿರುವುದು ರಾಜ್ಯದ ಹಿತದೃಷ್ಟಿಯಿಂದ ಮತ್ತು ಇಡೀ ದೇಶದಲ್ಲಿ ಕೂಡ ಈ ವಿಷಯ ಕುತೂಹಲ ಮೂಡಿಸಿದೆ.

(ಅಡಚಣೆ)

ಅನಂತರ ಒಬ್ಬರು ಎಂ.ಎಲ್.ಸಿ.ಯವರು ಈ ಮಾತನ್ನು ಹೇಳಿದ ಮೇಲೆ ಅದಕ್ಕೆ ಪುಷ್ಟೀಕರಿಸಿದಂಥವರು ಒಬ್ಬರು ಎಂ.ಪಿ.ಗಳೂ ಕೂಡ ಆಗಿದ್ದಾರೆ. ಅದಕ್ಕೆ ಪುಷ್ಟೀಕರಿಸಿದಂಥವರು ಒಬ್ಬರು ಮಂತ್ರಿಗಳೂ ಕೂಡ ಆಗಿದ್ದಾರೆ. ಇಷ್ಟು ಜನ ಅದಕ್ಕೆ ಸಮರ್ಥವಾಗಿ ಹೊರಗಡೆ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಚಾಲೆಂಜ್ ಮಾಡುತ್ತೇವೆ, ನಾನು ಪ್ರೂವ್ ಮಾಡುತ್ತೇನೆ, ನಾನು ಹೇಳಿರತಕ್ಕದ್ದಕ್ಕೆ ಹಿಂದಕ್ಕೆ ಹೋಗತಕ್ಕ ಪ್ರಶ್ನೆಯೇ ಇಲ್ಲ. ಇಲ್ಲಿಯವರೆಗೆ ಜನಾರ್ಧನರೆಡ್ಡಿ ಎಂ.ಎಲ್.ಸಿ.ಯವರೇನಿದ್ದಾರೆ ಅವರೇನು ಮಾತನ್ನು ಹೇಳಿದ್ದಾರೆ ಅದನ್ನು ಅವರು ವಾಪಸ್ ಪಡೆದುಕೊಂಡಿಲ್ಲ ನನ್ನ ಪ್ರಾಣ ಹೋದರೂ ಚಿಂತೆ ಇಲ್ಲ ನನ್ನ ಮಾತು ಏನು ಹೇಳಿದ್ದೇನೆ ಅದರ ಮೇಲೆ stick on ಆಗುತ್ತೇನೆ ಎನ್ನತಕ್ಕದ್ದು ಒಂದು ಪತ್ರಿಕೆಯಲ್ಲಿ ಅಲ್ಲ; ಒಂದು ಪತ್ರಿಕೆಯಲ್ಲಿ ಬಂದಿದ್ದರೆ, ನೀವು ಡಿನೈ ಮಾಡಬಹುದಾಗಿತ್ತು, ಆದರೆ ಮಿಡಿಯಾ ದೇಶದ ಮೀಡಿಯಾ ಇಡೀ ದೇಶದ ಪತ್ರಿಕೆಗಳಲ್ಲಿ ರಾಜ್ಯದ ಪತ್ರಿಕೆಗಳಲ್ಲಿ ಅದೂ ಅಲ್ಲದೆ ಖುದ್ದಾಗಿ ಪ್ರೆಸ್ ಕಾನ್‌ಫರೆನ್ಸ್.

ಅಧ್ಯಕ್ಷರು: ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲವೆಂದು ನಾನು ಆಗಲೇ ತೀರ್ಮ ಕೊಟ್ಟಿದ್ದೇನೆ. ನೀವು ಅದರ ಬಗ್ಗೆ ಪ್ರಸ್ತಾಪ ಮಾಡುವುದಾದರೆ

ಈ ಬೇಡಿಕೆಗಳು ಇದ್ದಾವೆ, ಅರಣ್ಯ, ಮೈನಿಂಗ್, ಜನರಲ್ ಅಡ್ಮಿನಿಸ್ಟ್ರೇಷನ್ ಇದ್ರೆ, ಅಲ್ಲಿ ಪ್ರಸ್ತಾಪ ಮಾಡಿ. ನಾನು ಅಲ್ಲಿ ಮೂವ್ ಮಾಡುತ್ತೇನೆ.

(ಅಡಚಣೆ)

ನೀವು ಏನು ಹೇಳುತ್ತಿದ್ದೀರಿ, I can understand. ಈಗ ನೀವು ಅದರ ಬಗ್ಗೆ ಚರ್ಚೆ ಮಾಡಬೇಕೆಂದರೆ ನಮ್ಮ ಅಜೆಂಡಾದಲ್ಲಿ ಎಲ್ಲಾ ಇದ್ದಾವೆ. ಎಲ್ಲಾ ಬೇಡಿಕೆಗಳನ್ನು ಇಟ್ಟುಬಿಟ್ಟಿದ್ದೇವೆ. ಅರಣ್ಯ ಮೈನಿಂಗ್, ಜನರಲ್ ಅಡ್ಮಿನಿಸ್ಟ್ರೇಷನ್ ಬರುತ್ತದೆ ಅದರಲ್ಲಿ ಭಾಗವಹಿಸಿ ತಾವು ಮಾತನಾಡಬಹುದು. But anyhow, adjournment motion ಕೆಳಗಡೆ ಅದು ಬರುವುದಿಲ್ಲ. ಅದನ್ನು ತಳ್ಳಿಹಾಕಿದ್ದೇನೆ. ಅದರ ಬಗ್ಗೆ don't go to ghe merits of the case.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ತಾವು ಸುಮಾರು ಒಂದು ಗಂಟೆ ಕಾಲದ ಆದಮೇಲೆ ಬೆಲ್ ಹಾಕಿ ಕರೆದಿದ್ದೀರಿ. ತಾವು ಸುಪ್ರೀಂ ಅಥಾರಿಟಿ. ಇದೂ ಕೂಡ ಪರ್ಮಿಶನ್ ಕೊಡತಕ್ಕದ್ದು ಅಥವಾ allow ಮಾಡತಕ್ಕದ್ದು ಇದಕ್ಕೂ ಸುಪ್ರೀಂ ಅಥಾರಿಟಿ ನೀವೇ. ಒಳ್ಳೆಯದು ಮಾಡುವುದು ನಿಮ್ಮಲ್ಲೇ ಇದೆ.

ಅಧ್ಯಕ್ಷರು: ನಾನು ಒಳ್ಳೆಯದನ್ನೇ ಮಾಡಿರುವುದು. ಅನೇಕ ರೂಲಿಂಗ್‌ಗಳೇನಿದೆ, ಅದರ ಪ್ರಕಾರ ನಿಮ್ಮದು adjournment motionಗೆ ಬರುವುದಿಲ್ಲ. ಅದರಲ್ಲಿ ನೋಡಿ. ನಾನು ರೂಲಿಂಗ್ ಕೊಟ್ಟಿದ್ದೇನಲ್ಲಾ ಮುಂದಿನ ತಿಂಗಳು ಬರುತ್ತದೆ ಎಂದು ಹೇಳುತ್ತಾರೆ. ಇಲ್ಲಿ ಏನಾಗಿದೆ ಎಂದರೆ it is on the agenda. You can participate.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಅದನ್ನು ಚರ್ಚೆಗೆ ಇಟ್ಟುಕೊಳ್ಳುವುದಿಲ್ಲವೆಂದರೆ ಹೇಗೆ? ಇಲ್ಲದಿದ್ದರೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಂಡು ಹೊರಕ್ಕೆ ಹಾಕಿ ಆ ಮೂವರನ್ನು, ಜನಾರ್ಧನ ರೆಡ್ಡಿಯವರನ್ನು ಹಾಕಲಿ, ಎಂ.ಪಿ. ಯವರನ್ನು ಹಾಕಿ, ಮಿನಿಸ್ಟರ್ ಯಾರು ಅದನ್ನು ಪುಷ್ಟೀಕರಿಸಿದ್ದಾರೆ ಅವರನ್ನು ಹಾಕಿ.

MR. SPEAKER: That is not in my purview

(ಅಡಚಣೆ)

SRI M.P. PRAKASH: Sir, kindly yield me. I have raised a point of order.

ಅಧ್ಯಕ್ಷರು: ಪ್ರಕಾಶ್‌ರವರು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದಾರೆ.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು, ಸಂಸದೀಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, Sir, I have raised a Point of order. He has got to yield if I have raised a point of order. ನಾನು ಈಗ ಕ್ರಿಯಾ ಲೋಪ ಎತ್ತಿರತಕ್ಕದ್ದು ಬಹಳ ಮುಖ್ಯವಾದುದು. ಅವರು ಏನು ವಿಷಯವನ್ನು ಪ್ರಸ್ತಾಪ ಮಾಡಬೇಕೋ

ಅದನ್ನು ಅವರು ಹೇಳಲಿ. ಅದರ ಬಗ್ಗೆ ಯಾರದ್ದೂ ಆಕ್ಷೇಪ ಇಲ್ಲ. ಕ್ರಿಯಾಲೋಪ ಏನೆಂದರೆ, ಒಂದನೆಯದು, ತಾವು ಈಗಾಗಲೇ ತಮ್ಮ ನಿರ್ಣಯವನ್ನು ಕೊಟ್ಟಿದ್ದೀರಿ. ತಾವು ತಳ್ಳಿಹಾಕಿರತಕ್ಕದ್ದನ್ನು ಮತ್ತೆ ಪ್ರಶ್ನೆ ಮಾಡಲು ಅವರಿಗೆ ಅವಕಾಶ ಇಲ್ಲ. ತಾವೂ ಕೂಡ ಈ ವಿಚಾರವನ್ನು ಹೇಳುವಾಗ ಈ ಸಂದರ್ಭದಲ್ಲಿ ಮೇಲ್ಮನೆಯ ಸದಸ್ಯ ಈ ರೀತಿ ಮಾತನಾಡಿದ್ದಾರೆ ಎಂಬ ವಿಚಾರದಲ್ಲಿ ನಮ್ಮದು Rules of Procedure ನಲ್ಲಿ 328ನ್ನು ನಾವು ಯಾವಾಗಲೂ ಗಮನಿಸಬೇಕಾಗುತ್ತದೆ. ಯಾವುದೇ ಆರೋಪ ಮತ್ತೊಂದು ಇರತಕ್ಕದ್ದು ಒಬ್ಬ ವ್ಯಕ್ತಿಯ ಕುರಿತು ಆಪಾದನೆ ಕುರಿತು ಕೈಗೊಳ್ಳಬೇಕಾದ ಕಾರ್ಯವಿಧಾನ, 328 ನಾವೇ ಮಾಡಿರತಕ್ಕದ್ದು ಸದಸ್ಯರೇ ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಯವರಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು ಯಾವ ಸದಸ್ಯರೂ ಯಾವ ವ್ಯಕ್ತಿಯ ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕದಲ್ಲ ಎಂದು ನಿಯಮ 328 ರಲ್ಲಿದೆ. ಮೇಲ್ಮನೆಯ ಸದಸ್ಯರೂ ಕೂಡ ಮಾಡುವುದಕ್ಕೆ, ಅವರದೇ ಕಾರ್ಯವಿಧಾನದಲ್ಲಿ, ನಿಯಮ 307ರಲ್ಲಿ ಇದೇ ರೀತಿಯಾಗಿರತಕ್ಕಂಥ ಅಲ್ಲಿಯ ನಿಯಮಾವಳಿಗಳನ್ನು ಅವರು ರಚಿಸಿಕೊಂಡಿದ್ದಾರೆ. ಅಲ್ಲಿ ಏನು ರಚಿಸಿಕೊಂಡಿರುತ್ತಾರೆ ಏನಾಗುತ್ತದೆ ಎನ್ನುವುದಕ್ಕಿಂತಲೂ ಕೂಡ, ಇವರು ಇಲ್ಲಿ ಹೇಳಬೇಕಾಗಿರುವುದು ನಿಯಮ 328ರ ಕೆಳಗೆ ಏನಾದರೂ ಬಂದರೆ ಅದನ್ನು ಚರ್ಚೆ ಮಾಡುತ್ತೇವೆ. ಈ ಸಂದರ್ಭವಿದ್ದಾಗ, ಬಹಳ ಮುಖ್ಯವಾಗಿರುವುದು, ವೈಕುಂಠ ಬಾಳಿಗರ ಬಗ್ಗೆ ಸದಾ ಕಾಲ ನಮ್ಮ ವಾಟಾಳ್ ನಾಗರಾಜ್‌ರವರು ಹೇಳುತ್ತಲೇ ಇರುತ್ತಾರೆ, ಅಂತಹ ಅತ್ಯುತ್ತಮವಾದ ಅಧ್ಯಕ್ಷರನ್ನು ನಾವು ಯಾವ ಕಾಲದಲ್ಲಿ ಕಾಣಲಿಲ್ಲವೆಂದು ಹೇಳುತ್ತಿರುತ್ತಾರೆ. ಅವರು ಕೊಟ್ಟಿರುವ ಪ್ರತಿ ತೀರ್ಮಾನಗಳನ್ನು ನಾವು ಮಾನ್ಯತೆ ಮಾಡಿ ಗೌರವಿಸಿ, ಉದಾಹರಿಸತಕ್ಕಂಥ ಅನೇಕ ಉದಾಹರಣೆಗಳು ಇದ್ದಾವೆ. ಇಂತಹ ವಿಚಾರ, ಗ್ರೋವರ್ ಕಮಿಷನ್ ವಿಚಾರದಲ್ಲಿ ಮಾತನಾಡುವಾಗಲೂ ಕೂಡ ಆವತ್ತು ವಿರೋಧಪಕ್ಷದ ನಾಯಕರಾದ ಶ್ರೀ ಎಸ್.ಆರ್. ಬೊಮ್ಮಾಯಿಯವರು, ಈ ತರಹದ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಡುತ್ತಾರೆ, ಆ ನಿಲುವಳಿ ಸೂಚನೆಯನ್ನು ತೆಗೆದುಹಾಕುವಂತಹ ಸಂದರ್ಭದಲ್ಲಿ ಅವರು ಹೇಳುತ್ತಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಬಾಳಿಗರವರಲ್ಲ, ಪಿ. ವೆಂಕಟರಮಣರವರು.

SRI M.P. PRAKASH: I am sorry, if I confused with the facts. ನಿಮಗೆ ಧನ್ಯವಾದಗಳು, ಅವರಿಲ್ಲದೆ ಬೇರೆಯಾರೇ ಇದ್ದರೂ ಕೂಡ.

'Judging the present notice on the criteria mentioned above, may be seen that the demands of grants relating to the Chief Minister are coming up for discussion of

this month. Demands for grants relating to other ministers are now being discussed. Members could raise the matter that demands of the Chief Minister are brought before the House.

ಎನ್ನುವಂತಹ ವಿಚಾರಗಳು ಬಂದಾಗ, ಇವತ್ತು ವಿತ್ತೀಯ ಕಲಾಪಗಳಲ್ಲಿ, ಎಲ್ಲಾ ವಿತ್ತೀಯ ಕಲಾಪಗಳಿಗೆ ಸಂಬಂಧಪಟ್ಟಿರತಕ್ಕಂಥದ್ದು, ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟಿದ್ದೂ ಕೂಡ, ತಾವು ಅಜೆಂಡಾದಲ್ಲಿ ಕಾಣಿಸಿದ್ದೀರಿ, ಆ ಸಂದರ್ಭದಲ್ಲಿ, ಈ ಎಲ್ಲಾ ವಿಚಾರಗಳನ್ನೂ ಕೂಡ ಮಾತನಾಡಲು ಅವಕಾಶವಿರುವಂಥ ಹಿನ್ನೆಲೆಯಲ್ಲಿ, 328ರ ಕೆಳಗೆ ಕೇಳದೆ ನಿಲುವಳಿ ಸೂಚನೆಯನ್ನು ತಾವು ತಿರಸ್ಕಾರ ಮಾಡಿದ ಮೇಲೆ ಮತ್ತೆ ಮಾತನಾಡುವುದು ಸರಿಯಾದುದಲ್ಲ ಎನ್ನುವುದು ನನ್ನ ಕ್ರಿಯಾಲೋಪ, ಅದನ್ನು ಇಲ್ಲಿಗೇ ಮುಕ್ತಾಯಗೊಳಿಸಬೇಕೆಂದು ಕೂಡ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸರ್ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಎತ್ತಿರತಕ್ಕಂಥ ಕ್ರಿಯಾಲೋಪಕ್ಕೆ ಪ್ರತಿಯಾಗಿ ನನ್ನ ವಾದವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ನಾನು ತಮ್ಮಲ್ಲಿ ಅವಕಾಶವನ್ನು ಕೇಳುತ್ತಿದ್ದೇನೆ. ನಮ್ಮ ಸದನ ಅಥವಾ ಮೇಲ್ಮನೆ ಯಾವ ರೀತಿ ಕೆಲಸ ಮಾಡಬೇಕೆಂಬುದರ ನಿಯಮಾವಳಿಗಳನ್ನು ಅವರು ಉಲ್ಲೇಖ ಮಾಡಿದ್ದಾರೆ. ಈ ಮನೆಯ ಅಥವಾ ಆ ಮನೆಯ ಸದಸ್ಯ, ಸದನದ ಕಲಾಪ ನಡೆಯುವ ವೇಳೆಗೆ ತಾನು ಹೇಗೆ ನಡೆದುಕೊಳ್ಳಬೇಕೆನ್ನುವುದಕ್ಕೆ ಇದು ಸೀಮಿತವಾಗುತ್ತದೆ. ಇಲ್ಲಿಯ ಸಂದರ್ಭವೇನೆಂದರೆ, ಜನಾರ್ಧನರೆಡ್ಡಿ ಎನ್ನುವ ಒಬ್ಬ ವ್ಯಕ್ತಿ ಎರಡೂ ಸದನಗಳ ಹೊರಗೆ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಗುರುತರವಾದಂಥ ಆಪಾದನೆಯನ್ನು ಮಾಡಿದ್ದಾರೆ, ಆಕಸ್ಮಿಕವಾಗಿ, incidentally, he is also a Member of the Upper House. ಅಷ್ಟೇ ಹೊರತು, ಇಲ್ಲಿ ಮೇಲ್ಮನೆಯ ನಿಯಮಾವಳಿಗಳನ್ನು ಈ ಸದನದ ನಿಯಮಾವಳಿಗಳನ್ನು ನಾವು ಪ್ರಶ್ನೆ ಮಾಡುತ್ತಿಲ್ಲ, ನೀವು ಓದಿರತಕ್ಕಂಥದ್ದು ಸತ್ಯ, ಆದರೆ ಈ ಸಂದರ್ಭಕ್ಕೆ ಅದು ಅನ್ವಯವಾಗುವುದಿಲ್ಲ. ಅವರು ರಾಜ್ಯದ ಮುಖ್ಯಮಂತ್ರಿಗಳ ಕುರಿತು ಸದನದ ಹೊರಗೆ ಹೇಳಿಕೆಯನ್ನು ಮಾಡಿದ್ದಾರೆ, ಹೇಳಿಕೆಯನ್ನು ಬದಲಾಯಿಸಿಕೊಂಡಿಲ್ಲ, ಹೇಳಿಕೆಯನ್ನು ನಿರಾಕರಣೆ ಮಾಡಿಲ್ಲ, ಆದುದರಿಂದ ಆ ವಿಚಾರ ಬಹಳ ಮುಖ್ಯವಾದುದು, ಆ ಹೇಳಿಕೆಯಾದ ಮೇಲೆ ಇವತ್ತೇ ಸದನ ಸೇರುತ್ತಿರುವುದು, ನಾನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ, ತಾವು ಗೃಹ ಸಚಿವರೂ ಕೂಡ ಆಗಿದ್ದೀರಿ, ರಾಜ್ಯದ ಮುಖ್ಯಮಂತ್ರಿ ಎಂದರೆ ನಿಷ್ಠುಗಷ್ಟೇ ಅಲ್ಲ ಮುಖ್ಯಮಂತ್ರಿ, ನಮಗೆಲ್ಲಾ ಮುಖ್ಯಮಂತ್ರಿ. ಈ ರೀತಿಯ ಒಂದು ಆಪಾದನೆಯನ್ನು ಅವರನ್ನು

ಕುರಿತು ಮಾಡಿದಾಗ ನಾವೆಲ್ಲರೂ ಕೂಡ ತಲೆತಗ್ಗಿಸಬೇಕಾಗಿದೆ ನಮಗೆಲ್ಲರಿಗೂ ಅಪಮಾನವಾಗಿದೆ. As Government, as Home Minister, what is the responsibility? What is the course open to you? you should have taken recourse under section 199 of Criminal Procedure Code. You should have instructed your State Prosecutor to lodge a complaint against this Janardhana Reddy before the Sessions Court. Please, read Section 199 ಆ ಪುಸ್ತಕವನ್ನು ಕೊಡಪ್ಪ ಅಲ್ಲಿ. Have you done that? If you have not done that, you have failed as a Government. You have failed as a Home Minister.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಸದಸ್ಯರು ಹೇಳಿದ್ದಾರೆ, ಅವರು ಯಾವ ನಿಯಮಾವಳಿಗಳ ಪ್ರಕಾರ ನಿಮಗೆ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯತೆ ಇದೆ ಎನ್ನುವುದರ ಬಗ್ಗೆ ಈಗ ಮಾತನಾಡಿದ್ದಾರೆ ಅದೊಂದೇ ಪ್ರಕಾರವಾಗಿ ಕ್ರಮ ಕೈಗೊಳ್ಳಬೇಕಾದಂಥದ್ದು ಇಲ್ಲ. ಹತ್ತಾರು ರೀತಿಯಲ್ಲಿ, ಒಬ್ಬ ಮುಖ್ಯಮಂತ್ರಿ ಮೇಲೆ ಸರ್ಕಾರದ ಮೇಲೆ ಮಾಡಿದ ಆಪಾದನೆ, ಎಲ್ಲರ ಮೇಲೆ ಮಾಡಿದ ಆಪಾದನೆ ಕೂಡ,....

SRI K.R. RAMESH KUMAR: Chief Minister is a public servant. He is a public servant holding the office of the Chief Minister. He is Chieftain. When he is Chieftain it is the duty of the Government to approach the Court through the prosecutor. You have failed in your duty. Do you want to hold a brief?

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರು, ಮುಖ್ಯಮಂತ್ರಿಗಳು, ಒಬ್ಬ ಸರ್ಕಾರಿ ನೌಕರ ಎನ್ನುವ ವಿಚಾರವನ್ನು, he is a servant of the Government ಎನ್ನುವುದರ ಬಗ್ಗೆ ಬೇಕಾದಷ್ಟು ಆಗಿದೆ, Section 21 of the IPC. ಪದೇ ಪದೇ ನಾವು ಹೇಳಬೇಕಾಗಿರುವುದಲ್ಲ, ನಾವೂ ಕೂಡ ಪಬ್ಲಿಕ್ ಸರ್ವೆಂಟ್ಸೇ, ಅದರ ಬಗ್ಗೆ ಭಿನ್ನಾಭಿಪ್ರಾಯಗಳಿಲ್ಲ. ಯಾವುದಾದರೂ ಸರ್ಕಾರದ ಒಬ್ಬ ವ್ಯಕ್ತಿಯ ಮೇಲೆ ಅಥವಾ ಮುಖ್ಯಮಂತ್ರಿಯ ಮೇಲೆ, ಸರ್ಕಾರದ ಮೇಲೆ, ಆಪಾದನೆ ಮಾಡಿದ ಸನ್ನಿವೇಶದಲ್ಲಿ, ಆ ಅಪಮಾನಕ್ಕೆ ಉತ್ತರ ಕೊಡುವುದು ನಮ್ಮ ಕರ್ತವ್ಯವಾಗಿದೆ. ಆ ಕರ್ತವ್ಯವನ್ನು ಮಾಡುವಾಗ, ಯಾವ ರೂಪದಲ್ಲಿರಬೇಕೆನ್ನುವುದನ್ನು ಅದರಲ್ಲಿ ಒಂದು ಸಲಹೆಯನ್ನು ಅವರು ನನಗೆ ಕೊಟ್ಟಿದ್ದಾರೆ, ನೀವು ಕ್ರಿಮಿನಲ್ ಪ್ರೊಸೀಜರ್ ಕೆಳಗೆ ಡೆಫಮೇಷನ್ ಕೇಸ್ ಹಾಕಬಹುದಾಗಿತ್ತಲ್ಲಾ ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ, ಅದೂ ಒಂದು ಸಲಹೆ, ಅದರಂತೆ ಹತ್ತಾರು ಸಲಹೆಗಳೂ ಕೂಡ ಇವೆ. ಅಪಮಾನಿತನಾದ ಒಬ್ಬ ವ್ಯಕ್ತಿ, ಅಪಮಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೇಳುವುದಕ್ಕೆ ಆಗುತ್ತದೆ. ಒಬ್ಬ ಗೃಹಮಂತ್ರಿಯಾದ ನೀವು, ಏನು ಮಾಡಿದ್ದೀರಿ

ಎಂಬುದು, ಎಫ್ಐಆರ್‌ನಲ್ಲಿರತಕ್ಕಂಥ ಹೆಸರನ್ನು, ಕಾರಣವನ್ನು, ಇಲ್ಲಿ ಬರೆಸಬೇಕಾದ ಕಾರಣವಿಲ್ಲ. ಎಫ್ಐಆರ್‌ನಲ್ಲಿ ಬಂದ ತಕ್ಷಣವೇ it is a procedural lapses. ಅನ್ನತಕ್ಕಂಥ ಮಾತು, ನೀವು ಎಷ್ಟು ಜಾಣತನದಿಂದ ಈ ವಿಚಾರಗಳನ್ನು ಮಂಡನೆ ಮಾಡುತ್ತಿದ್ದೀರೆಂಬುದು ಗೊತ್ತಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಸರ್, ಒಂದು ವೇಳೆ ನಿಮ್ಮ ಮನಸ್ಸಿನಲ್ಲಿ ಆ ಭಾವನೆ ಇದ್ದರೆ, ದಯಮಾಡಿ ಹೇಳುತ್ತಿದ್ದೇನೆ ಕೇಳಿ, ನಿಮ್ಮ, ನನ್ನ ನಡುವೆ ಇರತಕ್ಕಂಥ ವೈಯಕ್ತಿಕ ಸಂಬಂಧ ಕಾರಣಕ್ಕಾದರೂ ಕೂಡ ಆ ವಿಷಯವನ್ನು ಈ ಸದನದ ಸದಸ್ಯನಾಗಿ ಪ್ರತ್ಯಕ್ಷವಾಗಿ ಆಗಲಿ, ಪರೋಕ್ಷವಾಗಿ ಆಗಲಿ ನಾನು ಮಾತನಾಡುವುದಿಲ್ಲ, kindly don't get misguide. ನಾನು ನಿಮಗೆ ಹೇಳುತ್ತಿರುವುದು, as Home Minister, you should have directed your procecutor to appear before the Sessions Court. That is what I said. ಅದಕ್ಕು ಇದಕ್ಕು ಸಂಬಂಧವಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಇಂತಹ ವಿಚಾರಗಳ ಬಗ್ಗೆ, ನಮ್ಮ ವೈಯಕ್ತಿಕ ಸಂಬಂಧಗಳು ಪ್ರೀತಿಪ್ರೇಮಗಳನ್ನು ಇಟ್ಟುಕೊಳ್ಳಬೇಕಾದಂತಹ ಅಗತ್ಯವಿಲ್ಲ. Please, kindly bear with me.

SRI K.R. RAMESH KUMAR: You might not have such obligations. Let me concede that is my weakness. I have obligation, I will not raise that issue relating to you personally. I did not even, have it in my mind.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು): ಅವರು ಹೇಳುತ್ತಾರೆ, ನಿಮಗೇನು ಸಂಬಂಧ? ಕುಳಿತುಕೊಳ್ಳಿ, ಇದು ನಮಗೇನು ಸಂಬಂಧ, ನೀವು ಸುಮ್ಮನೆ ಕುಳಿತುಕೊಳ್ಳಿ, ** ನಿಮಗೊಬ್ಬರಿಗೆ ದೊಡ್ಡ ಗಂಟಲಿದೆ, ಕುಳಿತುಕೊಳ್ಳಿ ಸ್ವಾಮಿ, ಕುಳಿತುಕೊಳ್ಳಿ, ಇಷ್ಟು ದಿವಸ ನಿಮ್ಮದೆಲ್ಲಾ ಕೇಳಿ ಕೇಳಿ ಸಾಕಾಗಿದೆ, **

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಬಹಳ ಬೆಲೆಯುಳ್ಳ ಸದನದ ಸಮಯವನ್ನು ನಾವು ಬೇರೆ ಅನ್ಯ ಕಾರಣಕ್ಕಾಗಿ ಬಳಸತಕ್ಕಂಥದ್ದು ಸರಿಯಿಲ್ಲ. ಮಾನ್ಯ ಹಿರಿಯ ಸದಸ್ಯರಾದ ರಮೇಶ್ ಕುಮಾರ್‌ರವರು ಮಾತನಾಡಿದರು, ಈಗ ಆಪಾದನೆಗೆ ಒಳಗಾಗಿರುವ ಮನುಷ್ಯ ಹೇಗೆ ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕೆನ್ನುವುದನ್ನು, ಇದೊಂದು ಮಾರ್ಗೋಪಾಯವನ್ನು ಅವರು ನಮಗೆ ಸೂಚಿಸಿದ್ದಾರೆ, ಆ ಮಾರ್ಗೋಪಾಯಕ್ಕಾಗಿ ನಾನು ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ಅದರಂತಹ ಮಾರ್ಗೋಪಾಯಗಳು

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇನ್ನೂ ಮೂರ್ನಾಲ್ಕು ಕೂಡ ಇವೆ, ಅವನ್ನು ಯಾವ ಕಾಲದಲ್ಲಿ, ಯಾವ ಸಂದರ್ಭದಲ್ಲಿ, ಯಾರ ಮೇಲೆ ಯಾವ ರೀತಿಯಾಗಿ ಪ್ರಯೋಗ ಮಾಡಬೇಕೆನ್ನುವುದೂ ಕೂಡ ಇದೆ. ಒಂದು ಮಾರ್ಗೋಪಾಯದ ಪ್ರಕರಣ ತಾವು ಏನು ಹೇಳಿದ್ದೀರಿ, ನಿಯಮ 196ರಲ್ಲಿ ನೀವು ಇದನ್ನು ಪರಿಪಾಲಿಸಬೇಕು ಎಂದು ಇದೆ. ನೀವು ಅದಕ್ಕೆ ಒಂದು ಸಲಹೆ ಕೊಟ್ಟಿದ್ದೀರಿ ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದರ ಜೊತೆಗೆ ಇಲ್ಲಿ ಬಂದಿರತಕ್ಕಂಥ ಪ್ರಶ್ನೆ, ನಾವು ನಿರಪರಾಧಿಗಳು, ಆಪಾದನೆ ಸುಳ್ಳು ಎಂದು ಹೇಳಿ ತೋರಿಸಿಕೊಳ್ಳುವುದಕ್ಕೆ ನಮಗೆ ಅನೇಕ ಅವಕಾಶಗಳು ಇವೆ. ಆ ರೀತಿಯಾದಂಥ ಕೆಲಸವನ್ನು ನಾವು ಖಂಡಿತವಾಗಿ ಮಾಡುತ್ತೇವೆ. ತಲೆ ತಗ್ಗಿಸುವಂತಹ ಕೆಲಸವನ್ನು ನಾವು ಮಾಡಿಲ್ಲ.

(ಅಡಚಣೆ)

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದು ಆಗಬಾರದು. ಅವರು ಸ್ಪಷ್ಟವಾಗಿ ಮಾತನಾಡುವವರೆಗೆ ಮಧ್ಯ ಏಳಬಾರದು. ಸ್ಪಷ್ಟವಾಗಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ.ಎನ್. ರಮೇಶ್ ಕುಮಾರ್: ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ಇದು ರಾಜ್ಯದ ಮುಖ್ಯಮಂತ್ರಿಗಳನ್ನು ಕುರಿತಾಗಿ ಮಾಡಿರತಕ್ಕಂತಹ ಹೇಳಿಕೆ. ಒಬ್ಬ ಮನುಷ್ಯ ವಿಧಿ ಬದ್ಧವಾಗಿ ರಾಜ್ಯಪಾಲರ ಎದುರಿಗೆ ರಾಜ್ಯದ ಮುಖ್ಯಮಂತ್ರಿ ಎಂದು ಪ್ರಮಾಣವಚನ ಸ್ವೀಕಾರ ಮಾಡಿದಾಗ ಅವರು ನಮಗೆಲ್ಲರಿಗೂ ಕೂಡ ಮುಖ್ಯ ಮಂತ್ರಿಗಳಾಗುತ್ತಾರೆ. ಆ ಸ್ಥಾನದ ಗೌರವದ ದೃಷ್ಟಿಯಿಂದ, ಈ ರೀತಿಯ ಗುರುತರವಾದ ಹೇಳಿಕೆ, ಒಬ್ಬರ ಕಡೆಯಿಂದ ಅವರು ಯಾರೇ ಇರಬಹುದು, ಅವರ ಮೇಲೆ ಬಂದಾಗ ಜನರ ಮನಸ್ಸಿನಿಂದ ಸಂಶಯ ದೂರ ಮಾಡಲಿಕ್ಕೆ ಜನರ ಮನಸ್ಸಿಗೆ ನೆಮ್ಮದಿ ಆಗಲಿಕ್ಕೆ, ಅದು ನಿಮಗೆ ಆಪ್‌ಷನಲ್ ಆಗುವುದಿಲ್ಲ. ರೂಲ್ 99 ಆಪ್‌ಷನಲ್ ಆಗುವುದಿಲ್ಲ. It becomes mandatory. ನೀವು ಆ ತರಹದ ಹೇಳಿಕೆ ಮಾಡಿ ಹೊರಟು ಹೋದರೆ ಹೇಗೆ? ನೀವು ಮಾರ್ಗೋಪಾಯಗಳನ್ನು ಹುಡುಕಿಕೊಂಡು ಕಾಲ ಹಾಕಿಕೊಂಡು ಕುಳಿತುಕೊಳ್ಳುತ್ತೀರಾ? ರಾಜ್ಯದ ಜನರಿಗೆ ಏನು ಭಾವನೆ ಬರಬೇಕು? ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಡಿ.ಟಿ. ಜಯಕುಮಾರ್: ನಿಮ್ಮ ಬಗ್ಗೆ **

(ಅಡಚಣೆ)

ಶ್ರೀ ಆರ್. ಅಶೋಕ್: ವೀರಪ್ಪನ್ ಕೇಸ್‌ನಲ್ಲಿ ಪುಸ್ತಕಾನೇ ಬಿಡುಗಡೆ ಆಯಿತು. ದಿನಕರ್ ಬಗ್ಗೆ ಏನು ಕ್ರಮ ತೆಗೆದುಕೊಂಡಿರಿ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಎರಡನೇ ಸಲ ಈ ರೀತಿ ಆಗುತ್ತಿದೆ. ಒಂದು, ಮಾನ್ಯ ಕೃಷ್ಣಪ್ಪನವರು ಮಾತನಾಡುವಾಗ ** ಗೊತ್ತು ಎಂದು ಹೇಳಿದಿರಿ.

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಈಗ ಮಾತನಾಡುವಾಗ ಆ ಸದಸ್ಯರು ಹೇಳುತ್ತಾರೆ. ** ಆರೋಪ ಪ್ರತ್ಯಾರೋಪ ಈ ವಿಷಯಗಳನ್ನು ನೀವು ಮಾಡಿಕೊಂಡು ಹೋದ ಹಾಗೆ ಇನ್ನೊಬ್ಬರ ವಿಷಯಗಳನ್ನು ತೆಗೆದು ನೀವು ಈ ರೀತಿಯಾಗಿ ಸತ್ಯವನ್ನು ಮುಚ್ಚಿಡುವುದಕ್ಕಾಗುತ್ತಾ? ನೀವು ಇಂಥದಕ್ಕೆ ಕಡಿವಾಣ ಹಾಕಬೇಕು. ಬ್ಲಾಕ್ ಮೇಲ್ ಮಾಡುತ್ತೀರಾ ಏನಿದು? ನೀವಾದರೂ ಇಂಥವಕ್ಕೆ ಕಡಿವಾಣ ಹಾಕಬೇಕು.

(ಅಡಚಣೆ)

ಅಧ್ಯಕ್ಷರು: ಕುಳಿತುಕೊಳ್ಳಿ. ಒಬ್ಬೊಬ್ಬರೇ ಮಾತನಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೆದರಿಸುವುದು, ಬ್ಲಾಕ್‌ಮೇಲ್ ಮಾಡುವುದು, ಅವರು ಬೇಲ್ ತೆಗೆದುಕೊಂಡಿದ್ದಾರೆ, ಅವರು ಕುಳಿತಿದ್ದಾರೆ, ಅವರಿಗೆ ಗೊತ್ತಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಕೋರ್ಟ್ ಮುಂದಿದೆ. ವಿಚಾರಣೆ ಆಗಲಿ, ಕೋರ್ಟ್ ಏನು ತೀರ್ಮ ಕೊಡುತ್ತದೆ ಅದಕ್ಕೆ ತಲೆ ಬಾಗುತ್ತೇನೆ.**

ಶ್ರೀ ಡಿ.ಟಿ. ಜಯಕುಮಾರ್: ಸ್ಪೀಕರ್ ಆಗಿದ್ದವರು ಇವರು ಪದೇ ಪದೇ ಏಳುವುದು. ಅವರ ಹತ್ತಿರ ಕಲಿತುಕೊಳ್ಳಬೇಕು ನಾವು.** ನೀವು ಏನು ಮಾಡಿದ್ದೀರಿ ಎಂದು ಎಲ್ಲರಿಗೂ ಗೊತ್ತಿದೆ. ಏನು ** ಎಂದು ಹೇಳುತ್ತೀರಿ, ** ಎದ್ದು ನಿಂತು ಮಾತನಾಡುವುದಕ್ಕೆ ಗೊತ್ತಿಲ್ಲ. ** ನಾವು ನಿಮ್ಮ ಹತ್ತಿರ ಕಲಿಯಬೇಕು. ಇದು ನಿಮ್ಮ ಹತ್ತಿರ ಕಲಿಯಬೇಕಾ? ** ನೀವು ಒಬ್ಬರೇ ಇಲ್ಲಿ ಎಮ್‌ಎಲ್‌ಎ ಆಗಿರುವವರು, ನಾವೆಲ್ಲಾ ಎಮ್‌ಎಲ್‌ಎಗಳಾಗಿಲ್ಲ? ನಿಮಗೆ ಜನ ಹೇಗೆ ಆಯ್ಕೆ ಮಾಡಿದ್ದಾರೋ ಹಾಗೆಯೇ ನಮ್ಮನ್ನೂ ಆಯ್ಕೆ ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: **

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಯಾರಿಗೂ ನಿಯಮಾವಳಿ ಗೊತ್ತಿಲ್ಲ, ಏನೂ ಗೊತ್ತಿಲ್ಲ. ಸಭಾ ಮರ್ಯಾದೆ ಇಲ್ಲ ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ. ಇದು ಸರಿಯಲ್ಲ.

ಶ್ರೀ ಡಿ.ಟಿ. ಜಯಕುಮಾರ್: ** ಅದನ್ನು ಕಡತದಿಂದ ತೆಗೆದು ಹಾಕಬೇಕು. ** ದಯವಿಟ್ಟು ** ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಬೇಕು. ** ಎನ್ನುವ ಪದವನ್ನು ವಾಪಸ್ ತೆಗೆದುಕೊಳ್ಳಬೇಕು. ಆರೋಪ ಇದೆ ಎಂದು ಹೇಳಿದ್ದೇವೆ. ಅವರನ್ನು ಅಪರಾಧಿ ಎಂದು ಹೇಳಲಿಲ್ಲ. ಈ ಪದವನ್ನು ವಾಪಸ್ ತೆಗೆದುಕೊಳ್ಳಬೇಕು. ನಾನು ಅನ್ ಪಾರ್ಲಿಮೆಂಟರಿ ಪದ ಬಳಕೆ ಮಾಡಿದ್ದರೆ ಅವರೂ ಬಳಕೆ ಮಾಡಲಿ. ಒಬ್ಬ ಸ್ಪೀಕರ್ ಆಗಿದ್ದವರು ಇವರು. ಇವರ ಹತ್ತಿರ ಬೇರೆಯವರು ಕಲಿತುಕೊಳ್ಳಬೇಕು. ಇವರೊಬ್ಬರೇನಾ ಎಮ್‌ಎಲ್‌ಎ ಆಗಿರುವುದು, ನಾವೂ ಎಮ್‌ಎಲ್‌ಎಗಳಾಗಿದ್ದೇವೆ. ನಮಗೂ ಜನ ಆರಿಸಿ ಕಳುಹಿಸಿದ್ದಾರೆ. ಇವರೊಬ್ಬರೇ ಎಮ್‌ಎಲ್‌ಎ ಅಲ್ಲ. ** ಯಾವ ನೀತಿ ಇಲ್ಲ, ನಿಯಮ ಇಲ್ಲ, ** ಎನ್ನುವ ಪದ ಏನಿದೆ ಅದನ್ನು ಕಡತದಿಂದ ತೆಗೆದು ಹಾಕಿ.

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ** ಈ ಎಲ್ಲಾ ಪದಗಳನ್ನು ಕಡತದಿಂದ ತೆಗೆಸಿ ಹಾಕುತ್ತೇನೆ. ಇನ್ನು ಯಾವುದಾದರೂ ಅನ್ ಪಾರ್ಲಿಮೆಂಟರ್ ಪದಗಳಿದ್ದರೆ ಅದನ್ನು ಕಡತದಿಂದ ತೆಗೆಸಿ ಹಾಕುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ದಯಮಾಡಿ ಕೇಳಿ. ಅದು ಪಾರ್ಲಿಮೆಂಟರಿನಾ ಅನ್ ಪಾರ್ಲಿಮೆಂಟರಿನಾ ನಮ್ಮಲ್ಲಿ ಶಬ್ದಕೋಶ ಇದೆ. ಶಬ್ದಕೋಶ ತರಿಸಿ ಪರಾಮರ್ಶೆ ಮಾಡಿ. ಅವು ಶಬ್ದಕೋಶದ ರೀತ್ಯ ಅನ್ ಪಾರ್ಲಿಮೆಂಟರಿ ಆಗಿದ್ದರೆ, please remove that. If it is parliamentary allow it to remain.

ಅಧ್ಯಕ್ಷರು: ನೋಡುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್: ನಿಮಗೆ ಮಾತ್ರ ಪಾರ್ಲಿಮೆಂಟರಿ, ನನಗೆ ಮಾತ್ರ ಅನ್ ಪಾರ್ಲಿಮೆಂಟರಿನಾ?

ಅಧ್ಯಕ್ಷರು: ಆಯಿತು ನೋಡುತ್ತೇನೆ ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನೀವು ಇದಕ್ಕೆ ತೀರ್ಪು ಕೊಡಬೇಕು. ಆ ಪದಗಳು ಪಾರ್ಲಿಮೆಂಟರಿನಾ ಅನ್ ಪಾರ್ಲಿಮೆಂಟರಿನಾ? please go through the proceedings and give the ruling. I want your ruling.

MR. SPEAKER: It is not in good taste. ನಾನು ನೋಡುತ್ತೇನೆ. ನೋಡಿ ನಾನು ತೀರ್ಪು ಕೊಡುತ್ತೇನೆ. ಯಾವ್ಯಾವುವು ಅನ್ ಪಾರ್ಲಿಮೆಂಟರಿ ಇದೆ ಅದನ್ನು ನಾನು ಕಡತದಿಂದ ತೆಗೆಸಿ ಹಾಕುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಖಿರ್ಗೆ ಸಾಹೇಬರು, ಮತ್ತು ಮಾನ್ಯ ರಮೇಶ್ ಕುಮಾರ್‌ರವರು ಇವರೆಲ್ಲಾ ಹಿರಿಯ ಮುಖಂಡರು. ಇವರು ಕುಮಾರಸ್ವಾಮಿಯವರ ಬಗ್ಗೆ ಮಾತನಾಡಿದರು. ನಾನು ಮಾತನಾಡುವವರೆಗೆ ನನಗೆ ಅವಕಾಶ ಕೊಡಿ....

ಶ್ರೀ ಎನ್. ಧರ್ಮಸಿಂಗ್: ರೇವಣ್ಣನವರೇ, ಒಂದು ನಿಮಿಷ.....

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾವು ಮಾನ್ಯ ಕುಮಾರಸ್ವಾಮಿಯವರ ಬಗ್ಗೆ ಮಾತನಾಡಲಿಲ್ಲ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ನಿಲುವಳಿ ಸೂಚನೆ ಪ್ರಸ್ತಾಪ ಮಾಡತಕ್ಕಂತಹ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಕುಮಾರಸ್ವಾಮಿಯವರ ಮೇಲೆ ಆರೋಪ ಮಾಡಲಿಲ್ಲ. ನಿಮ್ಮ ಮಿತ್ರ ಪಕ್ಷದ ಒಬ್ಬ ಸದಸ್ಯರು, ಏನು ಹೇಳಿದರು ಅದನ್ನು ನಾವು ಹೇಳುತ್ತಿದ್ದೇವೆ. ಮಧ್ಯದಲ್ಲಿ ನಮ್ಮ ಚೆಲುವರಾಯಸ್ವಾಮಿ, ಮತ್ತು ಎ. ಕೃಷ್ಣಪ್ಪನವರು ಮಾತನಾಡುವುದನ್ನು ನಾನು ಕೇಳುತ್ತಿದ್ದೇನೆ. ಅವರು ನಿಮ್ಮ ಹಗರಣ ತೆಗೆಯುತ್ತೇವೆಂದು ಹೇಳಿದರು.

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅದಲ್ಲದೆ ನಮ್ಮ ಮಾನ್ಯ ಡಿ.ಟಿ. ಜಯಕುಮಾರ್‌ರವರು ಹೇಳುತ್ತಾರೆ, ನಿಮ್ಮ ಮೇಲೆ ಕೇಸ್ ಇದೆ ಎಂದು ಹೇಳುತ್ತಾರೆ. ಏನು ಕೇಸ್ ಇದೆ, ಹೈಕೋರ್ಟ್‌ಗೆ ಹೋಗಿದ್ದಾರೆ, ಬೇಲ್ ತೆಗೆದುಕೊಂಡಿದ್ದಾರೆ. **

ಶ್ರೀ ಡಿ.ಟಿ. ಜಯಕುಮಾರ್: **

ಅಧ್ಯಕ್ಷರು: ಕುಳಿತುಕೊಳ್ಳಿ. ರೇವಣ್ಣನವರೇ ಏನು ಹೇಳಿ?

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಆರ್. ರಮೇಶ್‌ಕುಮಾರ್: ಈಗ ಒಂದು ಸೆಕೆಂಡ್ ನಾನು ಈ ಸದನ ಮುಂದೆ ಹೋಗುವುದಕ್ಕೆ ಬಿಡುವುದಿಲ್ಲ. I am coming there. Kindly get the records. See the rules. See what he has spoken and you decide your role as Speaker. This cannot go on record. Sri, Please see that.

ಅಧ್ಯಕ್ಷರು: ನೋಡುತ್ತೇನೆ. ಕಡತೆ ತೆಗೆಸಿ ನೋಡುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್: ನೀವೂ ನೋಡಿ. ನೀವು ಅನ್ ಪಾರ್ಲಿಮೆಂಟರಿನೋ, ನಾವು ಅನ್ ಪಾರ್ಲಿಮೆಂಟರಿನೋ ನೋಡಿ. ಅನ್ ಪಾರ್ಲಿಮೆಂಟರಿ ಇದ್ದರೆ ತೆಗೆದು ಹಾಕಿ.

ಅಧ್ಯಕ್ಷರು: ಯಾವುದು ಅನ್ ಪಾರ್ಲಿಮಂಟರಿ ಇದೆಯೋ ಅದನ್ನು ನಾನು ತೆಗೆಸುತ್ತೇನೆ ಎಂದು ಹೇಳಿದ್ದೇನೆ. ಇಷ್ಟೊಂದು ಎಮೋಷನಲ್ ಏಕೆ ಆಗುತ್ತೀರಿ? This is not correct. ನೋಡಿ ತೆಗೆಸುತ್ತೇನೆ. This is not correct. ಎಲ್ಲ ನಿಂತುಕೊಂಡು ಫೋಡ ಹೈ ಮೈದಾನ್ ಹೈ ಎನ್ನುವಂತಾದರೆ ಏನಿದು? ಸಭೆನಾ ಇದು? ಅವರ ಕಡೆ ಆಗಲಿ, ನಿಮ್ಮ ಕಡೆ ಆಗಲಿ ಸರಿಯಾಗಿ ನಡೆದುಕೊಳ್ಳುತ್ತಿದ್ದೀರಾ?

(ಕಾಂಗ್ರೆಸ್ ಪಕ್ಷದ ಶಾಸಕರು ಭಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)

ಅಧ್ಯಕ್ಷರು: ನಿಮ್ಮ ನಿಮ್ಮ ರಾಜಕೀಯ ಪಕ್ಷಗಳನ್ನು ರಬ್ ಮಾಡಿಕೊಂಡು ಇಲ್ಲಿ ಮಾತನಾಡುತ್ತಿದ್ದೀರಾ? ಯಾರಾದರೂ ಗೌರವದಿಂದ ನಡೆದುಕೊಳ್ಳಬೇಕಾದುದು ಎಲ್ಲರ ಕರ್ತವ್ಯ. ಅದು ಬಿಟ್ಟು ನಾವು ಮಾತ್ರ ಸರಿಯಾಗಿದ್ದೇವೆ, ಇನ್ನೊಬ್ಬರು ಸರಿಯಾಗಿಲ್ಲ, ಎನ್ನುವ ಭಾವನೆ ಸರಿಯಲ್ಲ. ಅದ್ದರಿಂದ ಈ ಸಭೆ ಸದಸ್ಯರು ಯಾರೇ ಆಗಲಿ, ಆ ಕಡೆಯವರೇ ಆಗಲಿ, ಈ ಕಡೆಯವರೇ ಆಗಲಿ, ನಿಂತುಕೊಂಡು ಮಾತನಾಡಬೇಕು. ಸಭೆಯ ಗೌರವವನ್ನು ಕಾಪಾಡಬೇಕು. ಒಬ್ಬೊಬ್ಬರು ಒಂದೊಂದು ಮಾತನಾಡಿದರೆ ಏನೂ ಪ್ರಯೋಜನವಿಲ್ಲ. ಕಡತ ತೆಗೆಸಿ ನೋಡುತ್ತೇನೆಂದು ಹೇಳಿದ್ದೇನೆ ನೀವು ಹೀಗೆ ಮಾಡಿದರೆ ಹೇಗೆ?

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದರು)

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ನಾನು ಈಗ ಹೇಳುತ್ತಿದ್ದೇನೆ, ಅವರು ಯಾವ ಪದಗಳನ್ನು ಉಪಯೋಗಿಸಿದ್ದಾರೆ ಅದರಲ್ಲಿ ಯಾವುದು ಪಾರ್ಲಿಮೆಂಟರಿ, ಯಾವುದು ಪಾರ್ಲಿಮೆಂಟರಿ ಅಲ್ಲ ಎಂಬ ಬಗ್ಗೆ ನೋಡಿಸಬೇಕಾಗುತ್ತದೆ. ಅದನ್ನು ನೋಡಿಸಿ ತೆಗೆಸಿ ಹಾಕುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟರೂ ಕೂಡ ನೀವು ಈ ರೀತಿ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದು ಗೌರವಕ್ಕೆ ಬರುವುದಿಲ್ಲ. ನಾನು ನೋಡಿ ಅನ್-ಪಾರ್ಲಿಮೆಂಟರಿ ಇದ್ದರೆ ತೆಗೆಸಿ ಹಾಕುತ್ತೇನೆ. ಆದರೆ ಅದನ್ನು ನೋಡುವುದಕ್ಕಾದರೂ ನನಗೆ ಸಮಯ ಬೇಡವೇ? ನೀವು ಹೇಳಿದ ತಕ್ಷಣವೇ ಅದನ್ನು ಮಾಡುವುದಕ್ಕಾಗುತ್ತದೆಯೇ? ನೀವು ಈ ರೀತಿ ಮಾಡುವುದು ಯಾರಿಗೂ ಗೌರವ ತರುವಂಥದ್ದಲ್ಲ. ಸದನದ ಸಭೆಗೂ ಗೌರವ ಇದೆ. ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ, ಯಾರೇ ಅನ್-ಪಾರ್ಲಿಮೆಂಟರಿ ಪದಗಳನ್ನು ಉಪಯೋಗ ಮಾಡಿರಲಿ, ಅದನ್ನು ತೆಗಿಸಿಹಾಕುತ್ತೇನೆ. ನೀವು ಸಹಕರಿಸಬೇಕು. ಆದರೆ ನೀವು ಈ ರೀತಿ ಮಾಡುವುದು ಸರಿಯಲ್ಲ. ಈಗ ಸದನವನ್ನು ಮಧ್ಯಾಹ್ನ 3-30ಕ್ಕೆ ಸೇರುವಂತೆ ಭೋಜನಕ್ಕಾಗಿ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2 ಗಂಟೆ 11 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3-30ಕ್ಕೆ ಸೇರುವಂತೆ ನಿರ್ಧರಿಸಿತು)

ಸದನವು ಪುನಃ ಮಧ್ಯಾಹ್ನ 3.50 ಗಂಟೆಗೆ ಸಮಾವೇಶಗೊಂಡಿತು
ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು
(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ವಿಷಯ: ಸನ್ಮಾನ್ಯ ಸಭಾಧ್ಯಕ್ಷರ ತೀರ್ಪನ್ನು ಪುನರ್ ವಿಮರ್ಶಿಸಲು ಮನವಿ.

ಅಧ್ಯಕ್ಷರು: ಸದನದ ಬಾವಿಗೆ ಬಂದಿರುವ ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ record ಎಲ್ಲವನ್ನೂ ನೋಡಿ ಯಾವುದು unparliamentary ಇದೆ ಅದೆಲ್ಲವನ್ನೂ ತೆಗೆದು ಹಾಕಿದ್ದೇನೆ. ಆದ್ದರಿಂದ, ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ನಾನು ಹೇಳುವುದನ್ನು ದಯಮಾಡಿ ಕೇಳಿ. ಅವರು ಇವರ ಮೇಲೆ ಹೇಳುವುದು, ಇವರು ಅವರ ಮೇಲೆ ಹೇಳಿದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಕೆಲವು ಪದ ಉಪಯೋಗಿಸಿದ್ದಾರೆ. ಇವರು ಕೆಲವು ಪದ ಉಪಯೋಗಿಸಿದ್ದಾರೆ. ಅವೆಲ್ಲವನ್ನೂ ನೋಡಿಬಿಟ್ಟು ** ಈ ಪದದ ಬಗ್ಗೆ parliamentary ಇದರಲ್ಲಿ ಇದೆಯೇ ಎಂದು ನೋಡಿ ತಿಳಿಸಿದ್ದೇನೆ. ಅದಾದಮೇಲೆ, ಉಳಿದೆಲ್ಲವನ್ನೂ

** ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.